ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜೂನ್ 2019
ಬೆಲೆ ರೂ. 1



ಬಸವೇಶ್ವರ ಮತ್ತು ಮಾತೆ ಅಕ್ಕಮಹಾದೇವಿ ಜಯಂತಿ ಆಚರಣೆ






ನೂತನ ಸಚಿವ ಸಂಪುಟದಲ್ಲಿ ಕನ್ನಡಿಗರು



ಕು. ವರ್ಷಾ ಕಿಣಿ



ಓಶೋ ಮುರಗೋಡ



ಕು. ತೀಕ್ಷ್ಣ ಜೆ.



ಕು. ನಿತ್ಯಶ್ರೀ ಎ.



ಪ್ರವೀಣ್ ಕಡಕೋಳ



ಕ್ಷಿತಿಜ್ ಎಸ್.



ಅಹರ್ನಿಶ್ ಕೆ.ಎಸ್.



ಕು. ಭಕ್ತಿ ಸಫಲ್ ಮಾನಕಪುರೆ



ಮಹೇಶ್ ಕುಮಾರ್ ಶಾಂತಕುಮಾರ್ ನಿಂಬಾಲ್



ನವಯುಗ್ ಶ್ರೀರಾಮ್

## ಸಿ.ಬಿ.ಎಸ್.ಇ. ಪರೀಕ್ಷೆಯಲ್ಲಿ ಉನ್ನತ ಅಂಕ ಪಡೆದವರು



ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯರಾದ ಶ್ರೀ ವಿಜಯಕುಮಾರ್ ಸೋನಾರೆ, ಶ್ರೀ ಪ್ರಕಾಶ್ ಅಂಗಡಿ ಮತ್ತು ಶ್ರೀ ಭಾಸ್ಕರ್ ಇವರು ದಿನಾಂಕ 19.05.2019ರಂದು ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿದರು. ಅವರು ದೆಹಲಿಯಲ್ಲಿ ಜಾನಪದ ಉತ್ಸವವನ್ನು ಹಮ್ಮಿಕೊಳ್ಳುವ ಕುರಿತು ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ಮತ್ತು ಸಂಘದ ಆಜೀವ ಸದಸ್ಯ ಶ್ರೀ ಆರ್. ಭರತಾದ್ರಿ ಉಪಸ್ಥಿತರಿದ್ದರು.




ಕರ್ನಾಟಕ ಕಲಾಶ್ರೀ, ಸಂಗೀತ ಸರಸ್ವತಿ ಮತ್ತು ಪುರಂದರ ಅನುಗ್ರಹ ಪ್ರಶಸ್ತಿ ಪುರಸ್ಕೃತ ಡಾ. ಕೆ. ವಾಗೀಶ್ ಅವರನ್ನು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಬಸವೇಶ್ವರ ಮತ್ತು ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮದಲ್ಲಿ ಅಭಿನಂದಿಸಲಾಯಿತು.

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪುಟ 29 ಸಂಚಿಕೆ 9
ಜೂನ್ 2019

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

## ಸಂಪಾದಕೀಯ

# ಶೋಷಿತ ಮಕ್ಕಳ ದನಿಯೂ ಕೇಳಿಸಲಿ

ರಾಷ್ಟ್ರವಾದ, ಗಾಂಧಿವಾದ, ಗೋಡ್ಸೆ ಮೊದಲಾದುವು ಕಳೆದ ಮಹಾಚುನಾವಣೆ ಸಂದರ್ಭದಲ್ಲಿ ಚರ್ಚೆಯ ಪ್ರಧಾನ ವಿಷಯವಾಗಿತ್ತು. ಈಗ ಚುನಾವಣೆ ಮುಗಿದಿದೆ ಮತ್ತು ಫಲಿತಾಂಶವು ತಿಳಿದಿದೆ. ಸನ್ಮಾನ್ಯ ನರೇಂದ್ರ ಮೋದಿಯವರು ಅಭೂತಪೂರ್ವ ಗೆಲುವಿನೊಂದಿಗೆ ಮತ್ತೊಮ್ಮೆ ಪ್ರಧಾನಿಯಾಗಿದ್ದಾರೆ. ಅವರ ಸಚಿವ ಸಂಪುಟದಲ್ಲಿ ಕರ್ನಾಟಕದ ಮೂವರು ಹಿರಿಯ ರಾಜಕಾರಣಿಗಳು ಸಚಿವರಾಗಿದ್ದು ನಮಗೆ ಸಂತಸ ತಂದಿದೆ. ನೂತನ ಸಂಸದರು ಮತ್ತು ಸಚಿವರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು. ದೇಶದಲ್ಲಿ ಸ್ಥಿರ ಸರಕಾರ ಬರಲು ಸಾಧ್ಯವಾಗಿದ್ದು ಒಳ್ಳೆಯ ಬೆಳವಣಿಗೆ.

ನಮಗೆ ರಾಷ್ಟ್ರವಾದ ಸೇರಿದಂತೆ ವಿವಿಧ ಸಿದ್ಧಾಂತಗಳ ಚರ್ಚೆಯೂ ಬೇಕು. ಆದರೆ ಕೇವಲ ಭಾವನಾತ್ಮಕವಾಗಿ ಯೋಚಿಸುವುದರಿಂದ ಸ್ಥಳೀಯ ಸಮಸ್ಯೆಗಳು ಮತ್ತು ಯುವಜನತೆಯನ್ನು ಕಾಡುತ್ತಿರುವ ನಿರುದ್ಯೋಗ ಮತ್ತಿತರ ಸಂಕಷ್ಟಗಳು ಪರಿಹಾರ ಕಾಣುವುದಿಲ್ಲ. ಈ ನಿಟ್ಟಿನಲ್ಲಿ ಕೇಂದ್ರ ಸರಕಾರ ಕಳೆದ ಅವಧಿಯಲ್ಲಿ ಹಮ್ಮಿಕೊಂಡ ಕೌಶಲ ಅಭಿವೃದ್ಧಿ ಯೋಜನೆಗಳು ದೂರದೃಷ್ಟಿಯನ್ನು ಹೊಂದಿದೆ. ಇದು ಸಫಲವಾಗಲು ಪೂರಕವಾಗಿ ಉದ್ಯೋಗ ಸೃಷ್ಟಿ ಕಾರ್ಯವೂ ಆಗಬೇಕು.

ಭಾರತದಲ್ಲಿ ಬಾಲ ಕಾರ್ಮಿಕರು ಈಗಲೂ ಇದ್ದಾರೆ. ನಮ್ಮಲ್ಲಿ ಶಿಕ್ಷಣಕ್ಕೆ ಬೇಕಾದ ಸೌಲಭ್ಯಗಳು ಮತ್ತು ಪೂರಕ ಪರಿಸರವೂ ಇದೆ. ಆದರೆ ಅನಾಥ ಮಕ್ಕಳು, ಕೌಟುಂಬಿಕ ಕಲಹದಿಂದ ಬೇರೆಯಾದ ಹೆತ್ತವರ ಮಕ್ಕಳು ಸೇರಿದಂತೆ ಮುಗ್ದ ಬಾಲಕ, ಬಾಲಕಿಯರು ಪೋಷಕರ ರಕ್ಷಣೆ ಮತ್ತು ಪ್ರೀತಿಯಿಂದ ವಂಚಿತರಾಗುತ್ತಾರೆ. ನಂತರ ವಿಧಿಯಿಲ್ಲದೆ ಬಾಲ ಕಾರ್ಮಿಕರಾಗಿ ದುಡಿಯುತ್ತಾರೆ.



ಕೆಲವು ಅಮಾಯಕ ಮಕ್ಕಳು ವ್ಯವಸ್ಥಿತ ಜಾಲಕ್ಕೆ ಸಿಲುಕಿ ಭಿಕ್ಷಾಟನೆಯಂತಹ ದಂಧೆಗೆ ಇಳಿಯುತ್ತಾರೆ. ಇದಲ್ಲದೆ ಹೋಟೇಲು, ದಾಬಾಗಳಲ್ಲಿ ಪಾತ್ರೆ ತೊಳೆಯಲು, ರಸ್ತೆಬದಿಯಲ್ಲಿ ಕರಪತ್ರ ಮತ್ತು ಪತ್ರಿಕೆಗಳನ್ನು ಹಂಚಲು ಹದಿಹರೆಯದ ಮಕ್ಕಳನ್ನು ಬಳಸಲಾಗುತ್ತಿದೆ. ಉತ್ತರಪ್ರದೇಶ ರಾಜ್ಯವೊಂದರಲ್ಲೇ ಸುಮಾರು ಎರಡೂವರೆ ಲಕ್ಷ ಬಾಲ ಕಾರ್ಮಿಕರು ಇದ್ದಾರೆ ಎಂದು ಅಂಕಿಅಂಶಗಳು ಹೇಳುತ್ತವೆ.

ಸ್ವತಃ ಪ್ರಧಾನಿ ನರೇಂದ್ರ ಮೋದಿಯವರು ಬಾಲ್ಯದಲ್ಲಿ ತನ್ನ ತಂದೆಯ ಜೊತೆ ಮತ್ತು ಹದಿಹರೆಯದಲ್ಲಿ ಚಿಕ್ಕಪ್ಪನ ಚಹಾದ ಅಂಗಡಿಯಲ್ಲಿ ದುಡಿದಿದ್ದಾರೆ ಎಂಬುದು ನಮಗೆ ತಿಳಿದಿದೆ. ಈ ಕಾರಣದಿಂದ ಬಾಲ ಕಾರ್ಮಿಕ ಸಮಸ್ಯೆಯನ್ನು ಈಗಿನ ಪ್ರಧಾನಿಗಳು ಹೆಚ್ಚು ಅರ್ಥಮಾಡಿಕೊಳ್ಳಬಲ್ಲರು. ಬಾಲ ಕಾರ್ಮಿಕರ ಸಮಸ್ಯೆಗೆ ಮುಕ್ತಿ ಹಾಡಲು ನೂತನ ಮೋದಿ ಸರಕಾರ ಮುಂದಿನ ದಿನಗಳಲ್ಲಿ ಸೂಕ್ತ ಪರಿಹಾರ ಒದಗಿಸುತ್ತದೆ ಎಂದು ನಾವು ಆಶಿಸುವ. ರಾಷ್ಟ್ರವಾದದ ಚರ್ಚೆಯ ನಡುವೆ ಶೋಷಿತ ಮಕ್ಕಳ ದನಿಯೂ ಕೇಳಿಸಲಿ. ಸಮಾಜದ ಎಲ್ಲ ವರ್ಗಗಳ ಜನರು ನೆಮ್ಮದಿಯಿಂದ ಬದುಕುತ್ತಾ ದೇಶ ಪ್ರಗತಿಯತ್ತ ಸಾಗಲಿ ಎಂದು ಹಾರೈಸುವ.

*ಡಾ. ಅವನೀಂದ್ರನಾಥ್ ರಾವ್*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 29 ಸಂಚಿಕೆ 9
ಜೂನ್ 2019, ಬೆಲೆ ರೂ. 1

## ನಮ್ಮನಮ್ಮೊಳಗೆ

# ನೂತನ ಸಂಸದರಿಗೆ ಸಂಭ್ರಮದ ಸ್ವಾಗತ

ದೆಹಲಿಯಲ್ಲಿ ಈಗ ಭಾರತೀಯ ಜನತಾ ಪಕ್ಷ ಮತ್ತೊಮ್ಮೆ ಅಪೂರ್ವ ಬಹುಮತದೊಂದಿಗೆ ಮೋದಿಯವರ ನೇತೃತ್ವದಲ್ಲಿ ಅಧಿಕಾರ ವಹಿಸಿಕೊಂಡಿದೆ. ಕರ್ನಾಟಕದ ಮೂವರು ಸದಸ್ಯರಿಗೆ ಮೋದಿಯವರ ಮಂತ್ರಿಮಂಡಲದಲ್ಲಿ ಸ್ಥಾನ ದೊರೆತಿರುವುದು ದೆಹಲಿಯ ಕನ್ನಡಿಗರೆಲ್ಲರಿಗೂ ಸಂತಸದ ವಿಷಯ. ಅವರಲ್ಲಿ ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ಸದಾನಂದ ಗೌಡರು ದೆಹಲಿಯ ಕನ್ನಡಿಗರಿಗೆ, ಅದರಲ್ಲೂ ದೆಹಲಿ ಕರ್ನಾಟಕ ಸಂಘಕ್ಕೆ ಬಹುಕಾಲದಿಂದ ಪರಿಚಿತರು ಮತ್ತು ಸಂಘದ ಕಾರ್ಯಕ್ರಮದಲ್ಲಿ ನಿರಂತರವಾಗಿ ಭಾಗವಹಿಸುತ್ತ ಬಂದವರು. ಕನ್ನಡಕ್ಕೆ ಮತ್ತು ಕನ್ನಡದ ಕೆಲಸಕ್ಕೆ (ಹಾಗೂ ತುಳು ಭಾಷೆಯ ಸಮೃದ್ಧಿಗೆ) ಸದಾ ಬೆಂಬಲ ನೀಡುತ್ತ ಬಂದವರು.

ಧಾರವಾಡದಿಂದ ಸತತವಾಗಿ ನಾಲ್ಕನೇಯ ಬಾರಿ ಆಯ್ಕೆಯಾಗಿ ಬಂದ ಪ್ರಹ್ಲಾದ ಜೋಶಿಯವರೂ ಸಹ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳಾಗಿ ಅಧಿಕಾರವಹಿಸಿಕೊಂಡಿದ್ದಾರೆ. ಬೆಳಗಾವಿಯಿಂದ ಆರಿಸಿ ಬಂದ ಸುರೇಶ ಅಂಗಡಿಯವರೂ ಸಹ ರಾಜ್ಯ ಮಂತ್ರಿಗಳಾಗಿ ಕೇಂದ್ರ ಸರಕಾರದಲ್ಲಿ ಕರ್ನಾಟಕವನ್ನು ಪ್ರತಿನಿದಿಸುತ್ತಿದ್ದಾರೆ. ಈ ಮೂವರ ಜೊತೆ ನಿರ್ಮಲಾ ಸೀತಾರಾಮನ್ ರವರನ್ನು (ರಾಜ್ಯಸಭಾ ಸದಸ್ಯೆ) ಸೇರಿಸಿದರೆ ಈಗ ಕರ್ನಾಟಕದಿಂದ ಮೂವರು ಕ್ಯಾಬಿನೆಟ್ ದರ್ಜೆಯ ಮಂತ್ರಿಗಳಾಗಿ ಕಾರ್ಯ ನಿರ್ವಹಿಸುವಂತಾಗಿದೆ.

ಇವರೆಲ್ಲರಿಗೂ ಮತ್ತು ಹೊಸದಾಗಿ ಆಯ್ಕೆಯಾಗಿ ಬಂದ ಎಲ್ಲ ನೂತನ ಲೋಕಸಭಾ ಸದಸ್ಯರಿಗೆ ದೆಹಲಿ ಕನ್ನಡಿಗರ ಪರವಾಗಿ ಮತ್ತು ದೆಹಲಿ ಕರ್ನಾಟಕದ ಸಂಘದ ಪರವಾಗಿ ಹಾರ್ದಿಕವಾದ ಸ್ವಾಗತ ಮತ್ತು ಶುಭಾಶಯಗಳು. ಇವರೆಲ್ಲರ ಕಾರ್ಯಕಾಲದಲ್ಲಿ ನಮ್ಮ ದೇಶ ಮತ್ತು ರಾಜ್ಯ ಇನ್ನೂ ಉನ್ನತಿಯತ್ತ ಸಾಗಲಿ ಎಂಬುದೆ ನಮ್ಮೆಲ್ಲರ ಹಾರೈಕೆ.

ಈ ಎಲ್ಲ ಕರ್ನಾಟಕದ ಸನ್ಮಾನ್ಯ ಮಂತ್ರಿಗಳನ್ನು ಮತ್ತು ಲೋಕ ಸಭಾ ಸದಸ್ಯರುಗಳನ್ನು ದೆಹಲಿ ಕರ್ನಾಟಕ ಸಂಘಕ್ಕೆ ಆತ್ಮೀಯವಾಗಿ ಬರಮಾಡಿಕೊಂಡು ಅವರನ್ನು ಅಭಿನಂದಿಸುವ ಕಾರ್ಯಕ್ರಮವನ್ನು ನಮ್ಮ ಎಂದಿನ ಸಂಪ್ರದಾಯದಂತೆ ಹಮ್ಮಿಕೊಳ್ಳುವ ಬಗ್ಗೆ ಸದ್ಯದಲ್ಲೆ ನಾವೆಲ್ಲರೂ ಕಾರ್ಯಕಾರಿ ಸಮಿತಿಯಲ್ಲಿ ಸೇರಿ ನಿರ್ಣಯವನ್ನು ತೆಗೆದುಕೊಂಡು ತಮ್ಮೆಲ್ಲರನ್ನೂ ಈ ಕಾರ್ಯಕ್ರಮಕ್ಕೆ ಒಳಗೊಳ್ಳುವುದಕ್ಕೆ ನಾವು ಬದ್ಧರಾಗಿದ್ದೇವೆ.

ದೆಹಲಿಯಲ್ಲಿ ಪ್ರಮುಖವಾದ ನಮ್ಮ ಎರಡು ಕನ್ನಡ ಸಂಘಟನೆಗಳನ್ನು ಹುಟ್ಟು ಹಾಕಿ ಬೆಳೆಸುವಲ್ಲಿ ಕೇಂದ್ರ ಸರಕಾರದ ಮಂತ್ರಿಗಳ, ಸಂಸತ್ತಿನ ಸದಸ್ಯರ ಕೊಡುಗೆ ಬಹು ಅಪಾರವಾದದ್ದು. ಕೃಷ್ಣಮೂರ್ತಿರಾಯರು (ಆಗಿನ ಉಪಕುಲಸಭಾಪತಿಗಳು, ಲೋಕಸಭೆ), ಮಂತ್ರಿಗಳಾಗಿದ್ದ ಸರೋಜಿನಿ ಮಹಿಷಿಯವರು, ದೇವೆಗೌಡರವರು, ರಾಮಕೃಷ್ಣ ಹೆಗಡೆಯವರು, ಬೊಮ್ಮಾಯಿಯವರು, ಎಸ್.ಎಮ್. ಕೃಷ್ಣರವರು, ವೀರಪ್ಪ ಮೊಯಿಲಿಯವರು, ಯಡಿಯೂರಪ್ಪನವರು, ಅನಂತ ಕುಮಾರರವರು ಮತ್ತು ನೂರಾರು ಸಂಸತ್ತಿನ ಸದಸ್ಯರು...ಈ ಪಟ್ಟಿ ತುಂಬ ದೊಡ್ಡದು. ಇವರೆಲ್ಲರೂ ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಾಲೆಗಳನ್ನು ಕಟ್ಟಿ ಬೆಳೆಸುವಲ್ಲಿ ವಹಿಸಿದ ಪಾತ್ರ ಮತ್ತು ನೀಡಿದ ಸಹಾಯ ಹಸ್ತವನ್ನು ದೆಹಲಿ ಕನ್ನಡಿಗರು ಎಂದೂ ಮರೆಯುವಂತಿಲ್ಲ.

ಈ ಎಲ್ಲ ಹಿರಿಯ ನೇತಾರರೊಂದಿಗೆ ದೆಹಲಿ ಕರ್ನಾಟಕ ಸಂಘವೂ ಸಹ ಕರ್ನಾಟಕದ ಒಟ್ಟಾರೆ ಅಭಿವೃದ್ಧಿಗೆ ಮತ್ತು ಅದರ ಭಾಷೆ-ಸಂಸ್ಕೃತಿಯ ಬೆಳವಣಿಗೆಗೆ ಕಟಿಬದ್ಧವಾಗಿ ನಿಂತಿದೆಯೆಂಬುದನ್ನು ಹೇಳಬಯುಸುತ್ತೇನೆ. ಉತ್ತರ ಭಾರತದ ಕೆಲವು ವಿಶ್ವವಿದ್ಯಾಲಯಗಳಲ್ಲಿ ಖಾಲಿಯಾಗಿ ಕುಳಿತಿರುವ ಕನ್ನಡ ಪೀಠಗಳನ್ನು ಪುನಃಶ್ಚೇತನಗೊಳಿಸುವ ಕೆಲಸವಾಗಬೇಕಿದೆ. ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ದೆಹಲಿಯಲ್ಲಿ ಮತ್ತು ಉತ್ತರ ಭಾರತದಲ್ಲಿ ಕನ್ನಡೇತರರಿಗೆ ಪರಿಚಯ ಮಾಡಿಕೊಡುವ ಕೆಲಸವಾಗಬೇಕಿದೆ. ದೆಹಲಿಯಲ್ಲಿ ವ್ಯಾಪಕವಾಗಿ ಕನ್ನಡವನ್ನು ಕಲಿಸುವ ಕೆಲಸವಾಗಬೇಕಿದೆ. ತುಳು, ಕೊಡವ, ಕೊಂಕಣಿ ಮತ್ತು ಕರ್ನಾಟಕದ ಇತರ ಭಾಷಾ ಸಂಪತ್ತುಗಳಿಗೆ ಸಂವಿಧಾನದ ಮಾನ್ಯತೆ ನೀಡುವತ್ತ ನಾವೆಲ್ಲ ಸೇರಿ ಕೆಲಸ ಮಾಡಬೇಕಿದೆ.

ಈ ಎಲ್ಲದಕ್ಕೂ ನಮ್ಮ ಸಂಸದರ ಸಹಾಯಹಸ್ತ ಹಾಗೂ ಬೆಂಬಲ ನಮ್ಮೊಂದಿಗಿರಲಿ ಎಂದು ಹಾರೈಸುತ್ತ ಮತ್ತೊಮ್ಮೆ ಅವರೆಲ್ಲರನ್ನೂ ದೆಹಲಿಗೆ (ಈ ವಿಪರೀತ ಸೆಕೆಯ ಝಳದಲ್ಲೂ) ಸ್ವಾಗತಿಸುತ್ತ...ಅವರ ಸಂಸತ್ತಿನ ಮತ್ತು ಸರಕಾರದ ಕಾಲದಲ್ಲಿ ದೇಶದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಮೃದ್ಧಿಯ ಸುರಿಮಳೆಯಾಗಲಿ ಎಂದು ಹಾರೈಸುತ್ತೇನೆ.

***ಡಾ. ವೆಂಕಟಾಚಲ ಹೆಗಡೆ***
***ಅಧ್ಯಕ್ಷರು***

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ, ಲೋಕಸಭೆಗೆ ಕರ್ನಾಟಕದಿಂದ ಹೊಸದಾಗಿ 28 ಸಂಸದರು ಆಯ್ಕೆಯಾಗಿದ್ದಾರೆ. ಮುಂದಿನ ಐದು ವರ್ಷ ಅವರು ದೆಹಲಿ ಕನ್ನಡಿಗರಾಗಿ ಇರುತ್ತಾರೆ. ದೆಹಲಿ ಕರ್ನಾಟಕ ಸಂಘದ ಪರವಾಗಿ ಸ್ವಾಗತವನ್ನು ಕೋರುತ್ತೇನೆ.

ಕಳೆದ ಬಾರಿ ಆಯ್ಕೆಯಾಗಿ ಬಂದ ಸಂಸದರು ಅದರಲ್ಲಿಯೂ ಸಹ ವಿಶೇಷವಾಗಿ ನಮ್ಮ ಕೇಂದ್ರದ ಮಂತ್ರಿಗಳು ದೆಹಲಿ ಕರ್ನಾಟಕ ಸಂಘದ ಜೊತೆ ನಿಕಟ ಸಂಪರ್ಕವನ್ನು ಹೊಂದಿ ನಮಗೆ ಸಂಪೂರ್ಣ ಸಹಕಾರ ನೀಡಿದ್ದಾರೆ. ವಿಶೇಷವಾಗಿ ಕೇಂದ್ರ ಸಚಿವರಾದ ಶ್ರೀ ಡಿ.ವಿ. ಸದಾನಂದ ಗೌಡರು, ದಿ. ಅನಂತ ಕುಮಾರ್, ಶ್ರೀ ವೆಂಕಯ್ಯ ನಾಯ್ಡು ಅವರು ತುಂಬಾ ಸಹಕರಿಸಿದ್ದಾರೆ. ಸಂಘದ ಮುಂದೆ ಇರುವ ಮೆಟ್ರೋ ನಿಲ್ದಾಣಕ್ಕೆ 'ಸರ್ ಎಂ. ವಿಶ್ವೇಶ್ವರಯ್ಯ' ಎಂದು ನಾಮಕರಣ ಮಾಡುವಂತೆ ಕೋರಿದಾಗ ಆ ನಿಲ್ದಾಣಕ್ಕೆ ನಾಮಕರಣ ಮಾಡಿಸಲು ಸಂಪೂರ್ಣ ಸಹಕಾರ ನೀಡಿದ್ದಾರೆ. ಮಾನ್ಯ ಸದಾನಂದ ಗೌಡರು ಶಾಸ್ತ್ರೀಯ ಭಾಷೆ ಕನ್ನಡಕ್ಕೆ ಕೇಂದ್ರದಿಂದ ಅನುಕೂಲಗಳನ್ನು ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ರೈಲ್ವೇ ಮತ್ತು ಬ್ಯಾಂಕ್ ಸೆಕ್ಟರ್‌ಗಳಲ್ಲಿ ಕನ್ನಡದಲ್ಲಿ ಪರೀಕ್ಷೆ ಬರೆಯಬೇಕೆಂಬ ಕೋರಿಕೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಜೊತೆಗೂಡಿ ಯಶಸ್ವಿಗೊಳಿಸಿದ್ದಾರೆ.

ಇನ್ನೊಂದು ಸಂತೋಷದ ವಿಷಯವೆಂದರೆ ಶ್ರೀ ಸದಾನಂದ ಗೌಡ ಅವರು ಮರು ಆಯ್ಕೆಯಾಗಿ ಕೇಂದ್ರ ಸಂಪುಟದಲ್ಲಿ ಹಿರಿಯ ಮಂತ್ರಿಗಳಾಗಿ ಬಂದಿದ್ದಾರೆ. ಈ ಹಿಂದೆ ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಹಣಕಾಸು ಸಚಿವರಾಗಿ, ಶ್ರೀ ಪ್ರಹ್ಲಾದ್ ಜೋಷಿ ಅವರು ಕಲ್ಲಿದ್ದಲು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವರಾಗಿ ಮತ್ತು ಶ್ರೀ ಸುರೇಶ್ ಅಂಗಡಿ ಅವರು ರೈಲ್ವೇ ಖಾತೆ ರಾಜ್ಯ ಸಚಿವರಾಗಿ ಬಂದಿರುವುದು ಖುಷಿ ತಂದಿದೆ. ಎಲ್ಲಾ ಸಚಿವರು ಮತ್ತು ಸಂಸದರರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದನೆಗಳು. ಇನ್ನು ಮುಂಬರುವ ದಿನಗಳಲ್ಲಿ ಹೆಚ್ಚಿನ ಕೆಲಸ ಕಾರ್ಯಗಳನ್ನು ನಮ್ಮ ಕರ್ನಾಟಕಕ್ಕೆ ಮಾಡಲಿ ಮತ್ತು ಬರುವ ದಿನಗಳಲ್ಲಿ ನಮ್ಮ ಸಂಸದರಿಗೆ ಮತ್ತು ಕೇಂದ್ರದ ಮಂತ್ರಿಗಳಿಗೆ ಅಭಿನಂದನಾ ಕಾರ್ಯಕ್ರಮವನ್ನು ಮಾಡೋಣ. ಅವರಿಗೆ ಶುಭಾಶಯಗಳು.

ದೆಹಲಿಯಲ್ಲಿರುವ ಕನ್ನಡದ ಮಕ್ಕಳು ಹತ್ತು ಮತ್ತು ಹನ್ನೆರಡನೇ ತರಗತಿಯಲ್ಲಿ ತೇರ್ಗಡೆಯಾಗಿದ್ದಾರೆ. ಎಲ್ಲಾ ಮಕ್ಕಳಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಶುಭಾಶಯಗಳು. ಶೇಕಡಾ ತೊಂಬತ್ತಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಮಕ್ಕಳ ಭಾವಚಿತ್ರವನ್ನು ಸಂಘದ ಮುಖಪತ್ರಿಕೆ ಅಭಿಮತದಲ್ಲಿ ಪ್ರಕಟಿಸಲಾಗಿದೆ. ಅವರ ಭವಿಷ್ಯ ಉಜ್ವಲವಾಗಲಿ. ದೆಹಲಿ ಕರ್ನಾಟಕ ಸಂಘದ ಪರವಾಗಿ ಅವರಿಗೆ ಅಭಿನಂದನೆಗಳು.

***ಸಿ.ಎಂ. ನಾಗರಾಜ***
***ಪ್ರಧಾನ ಕಾರ್ಯದರ್ಶಿ***

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್, MBBS, MS (AIIMS), ONCO-SURGERY (IRCH, AIIMS)** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 16 ಜೂನ್, 2019ರಂದು

ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ B.A.M.S., Msc, Yoga Therapy** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 16 ಜೂನ್, 2019ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ MS, FNB, Spine Surgeon,** ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 30 ಜೂನ್, 2019ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್ M.D. (AYU)** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ
ಭಾನುವಾರ 30 ಜೂನ್, 2019ರಂದು ಸಾಯಂಕಾಲ 4 ಗಂಟೆಯಿಂದ.



**ದೆಹಲಿ ಕರ್ನಾಟಕ ಸಂಘದ**
**ಸುಸಜ್ಜಿತವಾದ ಆರ್ಟ್ ಗ್ಯಾಲರಿ**
**ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.**
**ಹೆಚ್ಚಿನ ಮಾಹಿತಿಗಾಗಿ**
**ದೆಹಲಿ ಕರ್ನಾಟಕ ಸಂಘದ**
**ಕಾರ್ಯಾಲಯವನ್ನು ಸಂಪರ್ಕಿಸಿರಿ.**
**ದೂರವಾಣಿ : 011–26109615 / 26104818**

# ಬಸವೇಶ್ವರ ಮತ್ತು ಮಾತೆ ಅಕ್ಕಮಹಾದೇವಿ ಜಯಂತಿ ಆಚರಣೆ




ದೆಹಲಿ ಕರ್ನಾಟಕ ಸಂಘವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರಿನ ಸಹಕಾರದೊಂದಿಗೆ ದಿನಾಂಕ 19.05.2019ರಂದು ಬಸವೇಶ್ವರ ಮತ್ತು ಮಾತೆ ಅಕ್ಕಮಹಾದೇವಿ ಜಯಂತಿಯನ್ನು ಸಂಘದ ಸಭಾಂಗಣದಲ್ಲಿ ಅದ್ದೂರಿಯಾಗಿ ಆಚರಿಸಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸುತ್ತೂರು ಭವನದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ನವದೆಹಲಿಯ ರಾಷ್ಟ್ರೀಯ ಗ್ರಾಹಕರ ವಿಚಾರಣಾ ಆಯೋಗದ ಸದಸ್ಯರಾದ ಡಾ. ಸಿದ್ಧರಾಮೇಶ್ವರ ಕಂಠೀಕರ್, ಜೆ.ಎಸ್.ಎಸ್. ಅಕಾಡೆಮಿ ಆಫ್ ಟೆಕ್ನಿಕಲ್ ಎಜ್ಯುಕೇಶನ್, ನೋಯ್ಡಾದ ಪ್ರಾಂಶುಪಾಲರಾದ ಡಾ. ಗುರುಲಿಂಗಪ್ಪ ಎಂ. ಪಾಟೀಲ, ಬಸವ ಇಂಟರ್‌ನ್ಯಾಶನಲ್ ಸೆಂಟರ್ ನವದೆಹಲಿಯ ಕಾರ್ಯದರ್ಶಿ ಶ್ರೀ ಸೋಮನಾಥ ಬಿರಾದಾರ ಅವರು ಉಪಸ್ಥಿತರಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ವಹಿಸಿದ್ದರು.

ಸುತ್ತೂರು ಭವನದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಅವರು ಬಸವಣ್ಣ ಅವರು ಕರ್ನಾಟಕದ ಒಬ್ಬ ಅಪ್ರತಿಮ ಪುಣ್ಯ ಪುರಷರು. ನಾಡಿನ ಶ್ರೇಷ್ಠ ಮೇಧಾವಿಗಳು. ನೂರು ವರ್ಷಗಳ ಹಿಂದೆ ಅವರು ಮಾಡಿರುವಂತಹ ಕಾರ್ಯಗಳು ಇಂದಿಗೂ ಆದರ್ಶಮಯ. ಜನಸಾಮಾನ್ಯರಿಗೆ ವಚನ ಸಾಹಿತ್ಯ ಇಂದಿಗೂ ದಾರಿದೀಪ ಎಂದರು.

ಅವರ ವ್ಯಕ್ತಿತ್ವ ಹೇಗಿತ್ತು ಅಂದರೆ ಕಣ್ಣಿನಲ್ಲಿ ಕರುಣೆ, ಹೃದಯದಲ್ಲಿ ಭಕ್ತಿಯ ಭಂಡಾರಿ, ಮತಿಯಲ್ಲಿ ಅಪ್ರತಿಮ ವಿದ್ವತ್ತು, ಕೈಗಳಿಂದ ಸದಾ ಲಿಂಗದ ಪೂಜೆ, ಸಾಮಾಜಿಕ ಸೇವೆ ಮಾಡುತ್ತಾ ಇರುವಂತಹ ಒಬ್ಬ ಪುಣ್ಯ ಪುರುಷರು ಮಹಾತ್ಮ ಬಸವೇಶ್ವರ. ಆಗಿನ ಕಾಲದಲ್ಲಿ ಸಮಾಜವನ್ನು ಕಟ್ಟಬೇಕು ಅನ್ನುವಂತಹ ಸಂದರ್ಭದಲ್ಲಿ ಯಾವುದೇ ಬೇಧ ಬಾವವನ್ನು ಮಾಡದೆ ಹಲವಾರು ಶಿವಶರಣರನ್ನು ಒಂದು ಕಡೆ ಸೇರಿಸಿ, ಅವರಿಗೆ ಜ್ಞಾನ ಅನುಭಾವವನ್ನು ಹಂಚಿಕೊಳ್ಳುವ ಮೊಟ್ಟಮೊದಲನೆಯ ಧರ್ಮದ ಪಾರ್ಲಿಮೆಂಟ್ ಸ್ಥಾಪಿಸಿದರು. ಧರ್ಮದ ಅನುಭಾವವನ್ನು ಮಂಟಪದಲ್ಲಿ ಕಟ್ಟಿದ್ದು ಕರ್ನಾಟಕ ಎಂದು ಹೇಳಲು ನಮಗೆ ಹೆಮ್ಮೆ ಮತ್ತು ಅಭಿಮಾನದ ಸಂಗತಿ ಎಂದರು.

ರಾಷ್ಟ್ರೀಯ ಗ್ರಾಹಕರ ವಿಚಾರಣಾ ಆಯೋಗದ ಸದಸ್ಯರಾದ ಡಾ. ಸಿದ್ಧರಾಮೇಶ್ವರ ಕಂಠೀಕರ್ ಅವರು ಮಾತನಾಡಿ 'ನನ್ನ ಗುರುಗಳಾದ ಡಾ. ನಾಗಲೋಟಿ ಅವರ ಜೊತೆಗೆ ಕೂಡಲ ಸಂಗಮಕ್ಕೆ ಹೋಗಿದ್ದೆ. ಅವರಿಂದ ಕೂಡಲ ಸಂಗಮದ ಇತಿಹಾಸವನ್ನು ತಿಳಿದುಕೊಂಡೆ. ಅವರು ಬಸವೇಶ್ವರರ ವಚನ 'ಕಾರ್ಯಕವೇ ಕೈಲಾಸ' ವನ್ನು ಅನುಸರಿಸು ನಿನ್ನ ಬದುಕು ಬೆಳಗುತ್ತದೆ' ಎಂದು ಸಲಹೆ ನೀಡಿದ್ದ ಅನುಭವವನ್ನು ಹಂಚಿಕೊಂಡರು.

ಜೆ.ಎಸ್.ಎಸ್. ಅಕಾಡೆಮಿ ಆಫ್ ಟೆಕ್ನಿಕಲ್ ಎಜ್ಯುಕೇಶನ್, ನೋಯ್ಡಾದ ಪ್ರಾಂಶುಪಾಲರಾದ ಡಾ. ಗುರುಲಿಂಗಪ್ಪ ಎಂ. ಪಾಟೀಲ ಅವರು ಮಾತನಾಡುತ್ತ ಇತಿಹಾಸದ ಪುಟಗಳಲ್ಲಿ ಜಗಜ್ಯೋತಿ ಬಸವಣ್ಣ ಅವರು 1105ರಲ್ಲಿ



**ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ**



**ಡಾ. ಸಿದ್ಧರಾಮೇಶ್ವರ ಕಂಠೀಕರ್**



**ಡಾ. ಗುರುಲಿಂಗಪ್ಪ ಎಂ. ಪಾಟೀಲ**



**ಸೋಮನಾಥ ಬಿರಾದಾರ**

ಮಾದರಸ ಮಾದಲಾಂಬಿಕೆ ದಂಪತಿಗಳಿಗೆ ಜನಿಸಿದರು ಎಂದು ಉಲ್ಲೇಖವಿದೆ. ಅವರು ಜನಿಸಿದ್ದು ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ. ತನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಾಗೇವಾಡಿಯಲ್ಲಿ ಮಾಡಿದರು. ಹೆಚ್ಚಿನ ವ್ಯಾಸಂಗ ನಂತರ ಬಸವಕಲ್ಯಾಣದಲ್ಲಿ ಕಳಚೂರು ರಾಜಮನೆತದ ಬಿಜ್ಜಳನ ಆಸ್ಥಾನದಲ್ಲಿ ಒಬ್ಬ ಕಾರಕೂನನಾಗಿ, ಕೋಶಾಧಿಕಾರಿಯಾಗಿ ನಂತರ ಪ್ರಧಾನ ಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದರು. ಅವರು ಕೂಡಲಸಂಗಮದಲ್ಲಿ 1196ರಲ್ಲಿ ಲಿಂಗೈಕ್ಯರಾದರು.

ಬಸವಣ್ಣನವರ ವಚನಸಾಹಿತ್ಯ ಶ್ರೇಷ್ಠ ಎಂದು ಹೇಳಿದರೆ ಸಾಲದು. ಒಂದೊಂದು ವಚನದ ಮೇಲೆ ಹತ್ತಾರು ಪಿ.ಎಚ್.ಡಿ.ಗಳನ್ನು ಮಾಡಬಹುದು. ಈ ಭೂಮಿ ಮೇಲೆ ಮನುಷ್ಯನ ಸಾಮಾಜಿಕ ಜೀವನ  ಆರಂಭ ಆಯಿತು. ಮನುಷ್ಯ ಸನಾತನ ಕಾಲದಿಂದ ಧರ್ಮವನ್ನು ಬೇರೆ ಬೇರೆ ರೀತಿಯಲ್ಲಿ ಆಚರಣೆ ಮಾಡುತ್ತನೇ ಇದ್ದಾನೆ. 12ನೇ ಶತಮಾನದಲ್ಲಿ ಧರ್ಮವನ್ನು ವೈಜ್ಞಾನಿಕ ತಳಹದಿಯ ಮೇಲೆ ಜಗತ್ತಿಗೆ ಪರಿಚಯ ಮಾಡಿದ ಮೊದಲ ವ್ಯಕ್ತಿ ವಿಶ್ವಮಾನವ ಬಸವಣ್ಣ ಅವರು. 12ನೇ ಶತಮಾನದಲ್ಲಿ ಎಲ್ಲಾ ಸಮಾಜದಿಂದ ಲಿಂಗಭೇಧವಿಲ್ಲದೆ ಜನರನ್ನು ಸೇರಿಸಿ ಅನುಭವ ಮಂಟಪವನ್ನು ಕಟ್ಟಿ ಎಲ್ಲರಿಗೆ ಸರಿಸಮಾನವಾದ ಸ್ಥಾನಮಾನ, ಗೌರವವನ್ನು ಕೊಟ್ಟ ಕೀರ್ತಿ ವಿಶ್ವಗುರು ಬಸವಣ್ಣ ಅವರಿಗೆ ಸಲ್ಲುತ್ತದೆ ಎಂದರು.

ನವದೆಹಲಿಯ ಬಸವ ಇಂಟರ್‌ನ್ಯಾಶನಲ್ ಸೆಂಟರ್ ಕಾರ್ಯದರ್ಶಿ ಸೋಮನಾಥ ಬಿರಾದಾರ ಅವರು ಮಾತನಾಡಿ ಬಸವಣ್ಣನವರು ಆರ್ಥಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ, ತತ್ವದರ್ಶನವಾಗಿ ಎಲ್ಲಾ ಕ್ಷೇತ್ರಗಳಲ್ಲಿ ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದ್ದಾರೆ. ಕನ್ನಡವನ್ನು ಆಡುವ ಭಾಷೆಯಲ್ಲಿ ಮಾತನಾಡಿ ಜನವಾಣಿಯನ್ನು ದೇವವಾಣಿಯ ಮಟ್ಟಕ್ಕೆ ಒಯ್ದುದಂತಹ ವ್ಯಕ್ತಿ. ಮನುಷ್ಯ ಏನಾದರೂ ಆಗು ಮೊದಲು ನೀ ಮಾನವನಾಗು ಎಂಬ ಮಾತನ್ನು ತಾತ್ವಿಕವಾಗಿ ಹೇಳಿದ್ದಾರೆ ಎಂದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಮಾತನಾಡಿ ಶರಣ ಸಾಹಿತ್ಯದ ಮೂಲಕ ಬಸವಣ್ಣನವರು ಕನ್ನಡವನ್ನು ಬಹಳ ಸರಳವಾಗಿ ಬಳಸುವಂತೆ 'ದಯವೇ ಧರ್ಮದ ಮೂಲವಯ್ಯ' ಎಂಬ ವಚನವನ್ನು ಹೇಳಿದರು. ಈ ನಾಲ್ಕು ಶಬ್ದದಲ್ಲಿ ನಮ್ಮ ಬದುಕಿನ, ಚಿಂತನೆಯ ಬಗೆಗಿನ ವಿಚಾರಗಳು ಅಡಗಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲ ಮಹನೀಯರು ಮಾತೆ ಅಕ್ಕಮಹಾದೇವಿಯವರ ಧೈರ್ಯ ಹಾಗೂ ಸ್ವಾಭಿಮಾನದ ಬದುಕು ಮತ್ತು ಅವರ ವಚನಗಳನ್ನು ಉಲ್ಲೇಖಿಸಿ ಸ್ಮರಿಸಿಕೊಂಡರು.

ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ಅತಿಥಿಗಳನ್ನು ಪರಿಚಯಿಸಿ ಸ್ವಾಗತಿಸಿದರು. ಉಪಾಧ್ಯಕ್ಷೆ ಶ್ರೀಮತಿ ಜಮುನಾ ಸಿ. ಮಠದ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಕು. ಶ್ರೇಷ್ಠಾ ತೇಲಿ ವಚನವನ್ನು ಹಾಡಿದರು. ಇದೇ ಸಂದರ್ಭದಲ್ಲಿ ಕಾರ್ಯನಿಮಿತ್ತ ದೆಹಲಿಗೆ ಆಗಮಿಸಿದ್ದ ದೆಹಲಿ ಕರ್ನಾಟಕ ಸಂಘದಲ್ಲಿ ಸಕ್ರಿಯರಾಗಿದ್ದ ಆಜೀವ ಸದಸ್ಯ ಶ್ರೀ ಆರ್. ಭರತಾದ್ರಿ ಅವರಿಗೆ ಸಂಘದ ಪರವಾಗಿ ಪುಷ್ಪಗುಚ್ಛ ನೀಡಿ ಸ್ವಾಗತಿಸಲಾಯಿತು.

ಕರ್ನಾಟಕ ಕಲಾಶ್ರೀ, ಸಂಗೀತ ಸರಸ್ವತಿ ಮತ್ತು ಪುರಂದರ ಅನುಗ್ರಹ ಪ್ರಶಸ್ತಿ ಪುರಸ್ಕೃತ ಡಾ. ಕೆ. ವಾಗೀಶ್ ಮತ್ತು ಸಂಗಡಿಗರಿಂದ ವಿಶೇಷ ವಚನ ಗಾಯನ ನಡೆಯಿತು. ದೆಹಲಿಯ ಹಿರಿಯ ಕಲಾವಿದ ಶ್ರೀ ಸುಧೀರ್ ಫಡ್ನೀಸ್ ಅವರು ತಬಲಾ ವಾದನದ ಹಿನ್ನಲೆ ಸಂಗೀತ ನೀಡಿದರು. •



**ಶ್ರೇಷ್ಠಾ ತೇಲಿ**



**ಕಾರ್ಯಕ್ರಮದಲ್ಲಿ ಭಾಗವಹಿಸಿದ ಆರ್. ಭರತಾದ್ರಿ**




**ದೆಹಲಿಯ ಅಮೆರಿಕನ್ ಲೈಬ್ರೇರಿ ಆಫ್ ಕಾಂಗ್ರೆಸ್‌ನಲ್ಲಿ ಸುದೀರ್ಘ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಶ್ರೀ ಸೋಮನಾಥ ಬಿರಾದಾರ ಅವರನ್ನು ದೆಹಲಿ ಕರ್ನಾಟಕ ಸಂಘದಿಂದ ಅಭಿನಂದಿಸಲಾಯಿತು**



**ಕರ್ನಾಟಕ ಕಲಾಶ್ರೀ, ಸಂಗೀತ ಸರಸ್ವತಿ ಮತ್ತು ಪುರಂದರ ಅನುಗ್ರಹ ಪ್ರಶಸ್ತಿ ಪುರಸ್ಕೃತ ಡಾ. ಕೆ. ವಾಗೀಶ್ ಮತ್ತು ಸಂಗಡಿಗರಿಂದ ವಿಶೇಷ ವಚನ ಗಾಯನ**

# ಶರಾವತಿ ಕರ್ನಾಟಕ ಸಂಘದಿಂದ ಪ್ರೊ. ಎಚ್.ಎಸ್. ಶಿವಪ್ರಕಾಶ್ ಅವರಿಗೆ ಬೀಳ್ಕೊಡುಗೆ

ಕನ್ನಡ ಖ್ಯಾತ ಕವಿ, ನಾಟಕಕಾರರು ಹಾಗೂ ಅಂಕಣಕಾರ ಪ್ರೊ. ಎಚ್. ಎಸ್. ಶಿವಪ್ರಕಾಶ್ ಅವರು ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದಿಂದ ಜೂನ್ ತಿಂಗಳ ಅಂತ್ಯದಲ್ಲಿ ನಿವೃತ್ತಿ ಹೊಂದಲಿದ್ದಾರೆ. ಈ ಸಂದರ್ಭದಲ್ಲಿ ಜೆ.ಎನ್.ಯುವಿನ ಶರಾವತಿ ಕರ್ನಾಟಕ ಸಂಘವು ದಿನಾಂಕ 28.05.2019 ರಂದು ಅವರಿಗೆ ಬೀಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಂಡಿತ್ತು.

ಈ ಸಂದರ್ಭದಲ್ಲಿ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ ಡಾ. ಪುರುಷೋತ್ತಮ ಬಿಳಿಮಲೆಯವರು ಎಚ್.ಎಸ್. ಶಿವಪ್ರಕಾಶರ ಸಾಹಿತ್ಯವನ್ನು ಮೆಲುಕು ಹಾಕಿದರು. ಅವರ 'ಸಮಗಾರ ಭೀಮವ್ವ'ನಿಂದ ಆರಂಭವಾಗಿ, ಯೋಗ, ನಾಟಕ, ಕಲೆ ಮತ್ತು ಸೌಂದರ್ಯ– ಅಲ್ಲದೆ ಶಂಕರಾಚಾರ್ಯರವರೆಗೆ ಹಲವು ವಿಷಯಗಳ ಮೇಲೆ ಇರುವ ಪಾಂಡಿತ್ಯವನ್ನು ತಿಳಿಸಿದರು. ಜೊತೆಗೆ ವೃತ್ತಿಯಿಂದಷ್ಟೇ ಅವರು ನಿವೃತ್ತಿ ಹೊಂದುತ್ತಿದ್ದಾರೆ, ಪ್ರವೃತ್ತಿಯಲ್ಲಿ ಇವರು ಸೃಜನಶೀಲ ಬರಹಗಾರರು, ಇದು ನಿರಂತರ ಎಂದರು. ಜಗತ್ತಿನ ಶ್ರೇಷ್ಠ ಕವಿಗಳ ಸಾಲಿನಲ್ಲಿ ಶಿವಪ್ರಕಾಶ್ ಕೂಡಾ ಒಬ್ಬರು ಎಂದು ಅವರು ಹೇಳಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಹಾಗೂ ಅಂತಾರಾಷ್ಟ್ರೀಯ ಕಾನೂನು ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಪ್ರೊ. ವೆಂಕಟಾಚಲ ಹೆಗಡೆಯವರು ತಾವು ಓದಿದ ಎಚ್. ಎಸ್. ಶಿವಪ್ರಕಾಶ್ ಅವರ ಸಾಹಿತ್ಯವನ್ನು ಪ್ರೀತಿಯಿಂದ ಹಂಚಿಕೊಂಡರು. ದೆಹಲಿ ವಿವಿಯ ಕಮಲಾ ನೆಹರೂ ಕಾಲೇಜಿನಲ್ಲಿ ಪತ್ರಿಕೋದ್ಯಮದ ಪ್ರಾಧ್ಯಾಪಕರಾದ ಶ್ರೀ ರಮೇಶ್ ಅರೋಲಿಯವರು ಶಿವಪ್ರಕಾಶ ಅವರ ಒಡನಾಟವನ್ನು ನೆನಪಿಸಿಕೊಂಡು ಒಂದು ಕವಿತೆಯನ್ನು ಓದಿದರು.



ಆನಂತರ ಎಚ್.ಎಸ್. ಶಿವಪ್ರಕಾಶ್ ಅವರು ತಮ್ಮ ವೃತ್ತಿ ಜೀವನದ ಆರಂಭವನ್ನು ಮೆಲುಕು ಹಾಕಿಕೊಂಡು ಹಂತ ಹಂತವಾಗಿ ತಾನು ಅನುಭವಿಸಿದ ಜೀವನದ ವಿಚಿತ್ರ ತಿರುವುಗಳನ್ನು ಹಂಚಿಕೊಂಡರು. ತಾನು ವೈದ್ಯ, ಇಂಜಿನಿಯರ್, ರಾಜಕಾರಣಿ ಆಗುವ ಎಲ್ಲಾ ಅವಕಾಶಗಳನ್ನು ತಿರಸ್ಕರಿಸಿ, ಕವಿಯಾಗಿ ರೂಪುಗೊಂಡ ಬಗೆಯನ್ನು ಸೂಕ್ಷ್ಮವಾಗಿ ವಿವರಿಸಿದರು. 'ನಾನು ಕವಿಯಾಗಿ ರೂಪುಗೊಳಲು ನನ್ನ ತಾಯಿ ಕಾರಣ' ಎಂದ ಅವರು, ಎಲ್ಲರೂ ವೈದ್ಯನಾಗು ಇಂಜಿನಿಯರ್ ಆಗು ಎಂದರೆ ನನ್ನ ತಾಯಿ ಒಳ್ಳೆಯ ಕವಿಯಾಗು ಎಂದಳು. ಇಂದು ನಾನು ಉತ್ತಮ ಕವಿಯಾಗಿದ್ದರೆ ಅದಕ್ಕೆ ಆಕೆಯೇ ಕಾರಣ ಎಂದು ಸ್ಮರಿಸಿದರು.

ಹಾಗೇಯೇ ಕವಿತೆಗೆ ಇರುವ ಶಕ್ತಿಯನ್ನು ಬಿಚ್ಚಿಡುತ್ತಾ, ಇಂದು ಜನರನ್ನು ಸೇರಿಸುವಲ್ಲಿ ಧರ್ಮ, ಶಿಕ್ಷಣ, ಸಿದ್ಧಾಂತ ಎಲ್ಲವೂ ಕೂಡ ಸೋತಿವೆ, ಆದರೆ ಕವಿತೆ ಇಂದಿಗೂ ಸೋತಿಲ್ಲ. ಕವಿತೆಗೆ ಜನರನ್ನು ಸೇರಿಸುವ ಶಕ್ತಿ ಇದೆ ಎಂದು ಹೇಳಿದರು.

ವೃತ್ತಿ ಜೀವನದಲ್ಲಿ (ಶೈಕ್ಷಣಿಕ ವಲಯದಲ್ಲಿ) ಎಡ ಬಲಗಳೆರಡರಿಂದಲೂ ಒಂದು ನಿರ್ದಿಷ್ಟ ಅಂತರವನ್ನು ಕಾಯ್ದುಕೊಳ್ಳುವುದು ಉತ್ತಮ ಎಂದು ಅವರು ಅಭಿಪ್ರಾಯಪಟ್ಟರು. ಯಾವುದೇ ಒಂದು ಸಿದ್ಧಾಂತಕ್ಕೆ ಜೋತುಬೀಳುವುದರಿಂದ ಜಡತೆ ಆವರಿಸುತ್ತದೆ. ಜಡತೆಯನ್ನು ಮೀರಬೇಕೆಂದರೆ ಎರಡರಿಂದಲೂ ಅಂತರ ಕಾಯ್ದುಕೊಂಡು ವಿಮರ್ಶಾತ್ಮಕವಾಗಿ ನೋಡಬೇಕು ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ಜೆ.ಎನ್.ಯುವಿನ ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಅವರ ಹಿತೈಷಿಗಳು ಹಾಜರಿದ್ದರು. ಶರಾವತಿ ಸಂಘದ ಅಧ್ಯಕ್ಷರಾದ ಶ್ರೀ ಸುಂದರೇಶ್ ಅವರು ಕಾರ್ಯಕ್ರಮಕ್ಕೆ ಎಲ್ಲರನ್ನೂ ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು.

*ಕೃಷ್ಣಮೂರ್ತಿ*

# ಸಿ.ಬಿ.ಎಸ್.ಇ. ಪರೀಕ್ಷೆಯಲ್ಲಿ ಉನ್ನತ ಅಂಕ ಪಡೆದವರು

ಈ ಬಾರಿಯ ಅಂದರೆ 2018–19ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ದೆಹಲಿ ಮತ್ತು ಎನ್.ಸಿ.ಆರ್. ಪ್ರದೇಶದಲ್ಲಿ ವ್ಯಾಸಂಗ ಮಾಡುತ್ತಿದ್ದ ಹಲವು ಕನ್ನಡದ ವಿದ್ಯಾರ್ಥಿಗಳು ಶೇಕಡಾ ತೊಂಬತ್ತಕ್ಕಿಂತಲೂ ಅಧಿಕ ಅಂಕ ಗಳಿಸಿದ್ದಾರೆ.

ಹತ್ತನೇ ತರಗತಿಯಲ್ಲಿ ಶ್ರೀ ಮಂಜುನಾಥ ಕಿಣಿ ಮತ್ತು ಶ್ರೀಮತಿ ಲಕ್ಷ್ಮೀ ಕಿಣಿ ಅವರ ಪುತ್ರಿ ಕು. ವರ್ಷಾ ಕಿಣಿ, ಶ್ರೀ ಆನಂದ ಮುರಗೋಡ ಮತ್ತು ಶ್ರೀಮತಿ ಸುಮಿತಾ ಮುರಗೋಡ ಅವರ ಪುತ್ರ ಓಶೋ ಮುರಗೋಡ, ಡಾ. ಜಗದೀಶ್ ಆರ್. ಎಸ್. ಮತ್ತು ಡಾ. ನಂದಿನಿ ಕೆ.ಇ. ಅವರ ಪುತ್ರಿ ಕು. ತೀಕ್ಷ್ಣ ಜೆ., ಡಾ. ಅಶೋಕ ಎಂ. ಈಟಿ ಮತ್ತು ಡಾ. ರೂಪಶ್ರೀ ಅವರ ಪುತ್ರಿ ಕು. ನಿತ್ಯಶ್ರೀ ಎ., ಶ್ರೀ ಪೀರಪ್ಪ ಕಡಕೋಳ ಮತ್ತು ಲಕ್ಷ್ಮೀ ಕಡಕೋಳ ಅವರ ಪುತ್ರ ಪ್ರವೀಣ್ ಕಡಕೋಳ ಮತ್ತು ಶ್ರೀಮತಿ ರೂಪಶ್ರೀ ಮತ್ತು ನರಸಿಂಹಮೂರ್ತಿ ಅವರ ಪುತ್ರ ಕ್ಷಿತಿಜ್ ಎಸ್. ಅವರು ಅತ್ಯಧಿಕ ಅಂಕ ಗಳಿಸಿದ್ದಾರೆ.

ಹನ್ನೆರಡನೇ ತರಗತಿಯಲ್ಲಿ ಶ್ರೀ ಕೆ.ಎಸ್. ಮೂರ್ತಿ ಮತ್ತು ಶ್ರೀ ಕೆ.ಸಿ. ಆರಾಧನಾ ಅವರ ಪುತ್ರ ಅಹರ್ನಿಶ್ ಕೆ.ಎಸ್., ಶ್ರೀ ಸಫಲ್ ಅನಂತ್ ಮಾನಕಪುರೆ ಮತ್ತು ಶ್ರೀಮತಿ ನಯನಾ ಮಾನಕಪುರೆ ಅವರ ಪುತ್ರಿ ಕು. ಭಕ್ತಿ ಸಫಲ್ ಮಾನಕಪುರೆ, ಶ್ರೀ ಶಾಂತಕುಮಾರ್ ವೀರಣ್ಣ ನಿಂಬಾಲ್ ಮತ್ತು ಶ್ರೀಮತಿ ಸುಜಾತ ಶಾಂತಕುಮಾಲ್ ನಿಂಬಾಲ್ ಅವರ ಪುತ್ರ ಮಹೇಶ್ ಕುಮಾರ್ ಶಾಂತಕುಮಾರ್ ನಿಂಬಾಲ್ ಮತ್ತು ಶ್ರೀಮತಿ ರೂಪಶ್ರೀ ಮತ್ತು ನರಸಿಂಹಮೂರ್ತಿ ಅವರ ಪುತ್ರ ನವಯುಗ್ ಶ್ರೀರಾಮ್ ಅತ್ಯಧಿಕ ಅಂಕ ಗಳಿಸಿದ್ದಾರೆ.

**ಉನ್ನತ ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳ ಭಾವಚಿತ್ರವನ್ನು ಮುಖಪುಟದಲ್ಲಿ ನೋಡಬಹುದು.** ಈ ಎಲ್ಲಾ ವಿದ್ಯಾರ್ಥಿಗಳಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.

**ವಿ.ಸೂ : ದಿನಾಂಕ 07.06.2019ರವರೆಗೆ ಬಂದ ವಿದ್ಯಾರ್ಥಿಗಳ ಭಾವಚಿತ್ರ ಮತ್ತು ಮಾಹಿತಿಯನ್ನು ಪ್ರಕಟಿಸಲಾಗಿದೆ. ಮುಂದೆ ಬರುವ ವಿದ್ಯಾರ್ಥಿಗಳ ಭಾವಚಿತ್ರ ಮತ್ತು ಮಾಹಿತಿಯನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

# ಕವಿತೆಯಿಂದ ನಿವೃತ್ತಿಯಾಗದ ಕವಿ-ಎಚ್.ಎಸ್. ಶಿವಪ್ರಕಾಶ್

ದೆಹಲಿಯ ಗೆಳೆಯರಿಂದ ಶಿವ್ ಎಂದೇ ಕರೆಯಿಸಿಕೊಳ್ಳುತ್ತಿರುವ ನಮ್ಮ ಪ್ರೀತಿಯ ಕವಿ ಎಚ್.ಎಸ್. ಶಿವಪ್ರಕಾಶ್ ಅವರು ಇದೇ ಜೂನ್ ತಿಂಗಳನಲ್ಲಿ (ಜನನ 1954) ಜೆ.ಎನ್. ಯುವಿನಿಂದ ನಿವೃತ್ತರಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ಕೆಲವರು ಅವರ ಸುತ್ತ ಕುಳಿತಿದ್ದೆವು. ಶಿವಪ್ರಕಾಶ್ ಪುಟ್ಟ ಮಗುವಿನ ಹಾಗೆ ಮಾತಾಡುತ್ತಲೇ ಹೋದರು.

ಅವರದೊಂದು ಸುದೀರ್ಘ ಪಯಣದ ಬದುಕು. ಅದರಲ್ಲಿ ಅನೇಕ ಏರು ಪೇರುಗಳು. ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಇಂಗ್ಲೀಷ್ ಸಾಹಿತ್ಯದಲ್ಲಿ ಎಂ.ಎ. ಪದವಿ. ಆನಂತರ ಬೆಂಗಳೂರು ಮತ್ತು ತುಮಕೂರುಗಳ ವಿವಿಧ ಕಾಲೇಜುಗಳಲ್ಲಿ ಎರಡು ದಶಕಗಳ ಕಾಲ ಇಂಗ್ಲಿಷ್ ಉಪನ್ಯಾಸಕನಾಗಿ ಕೆಲಸ. 'ಆ ಕಾಲದಲ್ಲಿ ನಾನು ಕನ್ನಡ ಮಾತಾಡಿದ್ದೇ ಜಾಸ್ತಿ' ಅನ್ನುತ್ತಾರೆ ಶಿವಪ್ರಕಾಶ್. 1996ರಲ್ಲಿ ನವದೆಹಲಿಯ ಸಾಹಿತ್ಯ ಅಕಾಡೆಮಿಯ 'ಜರ್ನಲ್ ಆಫ್ ಇಂಡಿಯನ್ ಲಿಟರೇಚರ್‌ನ ಸಂಪಾದಕರಾಗಿ ನೇಮಕ. 2001ರಲ್ಲಿ ಅಸೋಸಿಯೇಟ್ ಪ್ರಾಧ್ಯಾಪಕರಾಗಿ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ನೇಮಕಾತಿ. ಈ ನಡುವೆ ಅಮೇರಿಕಾದ ಅಯೋವಾದ ವಿಶ್ವವಿದ್ಯಾನಿಲಯ ಮತ್ತು ಬರ್ಲಿನ್‌ನ ಟಾಗೋರ್ ಸೆಂಟರ್‌ನ ನಿರ್ದೇಶಕರಾಗಿಯೂ ಕೆಲಸ. ಈ ಎಲ್ಲಾ ಕೆಲಸಗಳ ನಡುವೆ ಅವರ ಶ್ರದ್ಧೆಯ ಕೇಂದ್ರದಲ್ಲಿ ಉಳಿದು ಬಂದದ್ದು ಅವರ ಕವಿತೆಗಳು. ಅದನ್ನವರು ಎಂದೂ ಬಿಡಲಿಲ್ಲ. ಸಮಯ ಸಿಕ್ಕಾಗಲೆಲ್ಲಾ, ವಿಮಾನ ಹಾರಾಟದ ಸಮಯದಲ್ಲಿ, ಕಾರು ಪ್ರವಾಸದಲ್ಲಿದ್ದಾಗ, ನಿದ್ದೆ ಬಾರದೆ ಎದ್ದು ಕೂತಾಗ ಮುಂದುವರಿಸುತ್ತೇನೆ. ಈ ಸೃಜನ ಕಾಯಕದ ಕತೆಯೇ ಹೀಗೆ. ಬಾ ಅಂದಾಗ ಬರುವುದಿಲ್ಲ. ಬಂದಾಗ ಬೇಡವೆಂದರೂ ಒದ್ದುಕೊಂಡು ಬಂದುಬಿಡುತ್ತದೆ' ಎನ್ನುತ್ತಾರೆ ಶಿವಪ್ರಕಾಶ್.

ಶಿವಪ್ರಕಾಶ್ ಅವರು ಇಪ್ಪತ್ತಮೂರನೇ ವಯಸ್ಸಿನಲ್ಲಿ ತಮ್ಮ ಮೊದಲ ಕವನ ಸಂಕಲನ ಮಿಲರೆಪ (1977)ವನ್ನು ಪ್ರಕಟಿಸಿದಾಗ ಕನ್ನಡಕ್ಕೊಂದು ಹೊಸ ಭಾಷೆ ದೊರಕಿತ್ತು. 1983 ರಲ್ಲಿ ಅವರ ಎರಡನೇ ಸಂಕಲನ "ಮಳೆಬಿದ್ದ ನೆಲದಲ್ಲಿ" ಪ್ರಕಟವಾದಾಗ ಶಿವಪ್ರಕಾಶ್ ನಾಡಿನಾದ್ಯಂತ ಜನಪ್ರಿಯರಾದರು. ನಾಗಲಿಂಗ ಯೋಗಿಗೆ ಮೊಲೆ ಹಾಲು ನೀಡಿ ಯೋಗಿಯ ರೋಗ ಗುಣಪಡಿಸಿದ "ಸಮಗಾರ ಭೀಮವ್ವ" ಕವಿತೆಯನ್ನು ಓದಿ ನಾವೆಲ್ಲ ಹುಚ್ಚಾಗಿಬಿಟ್ಟಿದ್ದೆವು. ಒಂದೆಡೆ ಪುರಾಣವೇ ತಲೆಕೆಳಗಾದ ಸಂಭ್ರಮ, ಇನ್ನೊಂದೆಡೆ ಎಲ್ಲೋ ಅಂಚಿನಲ್ಲಿದ್ದ ತತ್ವಪದಗಳು ಕೇಂದ್ರಕ್ಕೆ ಬಂದ ಪುಳಕ-ಹೀಗೆ ಶಿವಪ್ರಕಾಶ್ ನಮ್ಮೊಳಗೆ ಸೇರಿಕೊಂಡರು. ಮುಂದೆ ಅವರು ಅಣುಕ್ಷಣ ಚರಿತೆ, ಸೂರ್ಯಜಲ, ಮಳೆಯ ಮಂಟಪ, ಮತ್ತೆ ಮತ್ತೆ, ಮಬ್ಬಿನ ಹಾಗೆ ಕಣಿವೆ ಹಾಸಿ ಮೊದಲಾದ ಸಂಕಲನಗಳನ್ನು ಹೊರತಂದರು. ಅನುವಾದಗಳನ್ನೂ ಮಾಡಿದರು.



**ಅವರ ಶ್ರದ್ಧೆಯ ಕೇಂದ್ರದಲ್ಲಿ ಉಳಿದು ಬಂದದ್ದು ಅವರ ಕವಿತೆಗಳು. ಅದನ್ನವರು ಎಂದೂ ಬಿಡಲಿಲ್ಲ. ಸಮಯ ಸಿಕ್ಕಾಗಲೆಲ್ಲಾ, ವಿಮಾನ ಹಾರಾಟದ ಸಮಯದಲ್ಲಿ, ಕಾರು ಪ್ರವಾಸದಲ್ಲಿದ್ದಾಗ, ನಿದ್ದೆ ಬಾರದೆ ಎದ್ದು ಕೂತಾಗ ಮುಂದುವರಿಸುತ್ತೇನೆ. ಈ ಸೃಜನ ಕಾಯಕದ ಕತೆಯೇ ಹೀಗೆ. ಬಾ ಅಂದಾಗ ಬರುವುದಿಲ್ಲ. ಬಂದಾಗ ಬೇಡವೆಂದರೂ ಒದ್ದುಕೊಂಡು ಬಂದುಬಿಡುತ್ತದೆ' ಎನ್ನುತ್ತಾರೆ ಶಿವಪ್ರಕಾಶ್**

ಸಾಂಪ್ರದಾಯಕ ಚಿಂತನೆಗಳು ಹೊರಗಿಟ್ಟ ಪ್ರತಿಮೆಗಳನ್ನು ಕಾವ್ಯಕ್ಕೆ ತರುವುದರ ಮೂಲಕ ಶಿವಪ್ರಕಾಶ್ ಕನ್ನಡಕ್ಕೆ ಮಾತ್ರವಲ್ಲ ದೇಶಕ್ಕೇ ರೋಮಾಂಚನ ಉಂಟುಮಾಡಿದರು. ಇವತ್ತು ಶಿವಪ್ರಕಾಶ್ ಕವಿತೆ ಓದುತ್ತಾರೆಂದರೆ ದೇಶದ ಎಲ್ಲೆಡೆಯೂ ಸಭಾಂಗಣಗಳು ತುಂಬಿ ತುಳುಕುತ್ತವೆ.

ಕವಿತೆಯ ಜೊತೆ ಜೊತೆಗೆ ಶಿವಪ್ರಕಾಶ್ ರಂಗಭೂಮಿಯನ್ನೂ ಅಪ್ಪಿಕೊಂಡರು. 1986ರಲ್ಲಿ ಅವರ ಮೊದಲ ನಾಟಕ 'ಮಹಾಚೈತ್ರ' ಪ್ರಕಟವಾಯಿತು. ಗೆಳೆಯ ಸಿ.ಜಿ.ಕೃಷ್ಣಸ್ವಾಮಿಯವರು 'ಸಮುದಾಯ' ತಂಡಕ್ಕಾಗಿ ನಿರ್ದೇಶಿಸಿದ ಈ ನಾಟಕ ಪ್ರಸಿದ್ಧವೂ, ಮುಂದೆ ವಿವಾದಾಸ್ಪದವೂ ಆಯಿತು. ಸಮುದಾಯದ ಸದಸ್ಯರಾಗಿದ್ದ ನಾವೆಲ್ಲ ಬೀದಿಗಿಳಿದು ಶಿವಪ್ರಕಾಶ್ ಪರ ಹೋರಾಟ ನಡೆಸಿದೆವು. ಮುಂದೆ ಶಿವಪ್ರಕಾಶ್ ಸುಲ್ತಾನ್ ಟಿಪ್ಪು, ಷೇಕ್ಸ್ಪಿಯರ್ ಸ್ವಪ್ನನೌಕೆ, ಮಂಟೇಸ್ವಾಮಿ ಕಥಾ ಪ್ರಸಂಗ, ಮಾದಾರಿ ಮಾದಯ್ಯ, ಮಧುರೆಕಾಂಡ, ಮಾಧವಿ, ಮಾತೃಕಾ, ಮಕರಚಂದ್ರ, ಮದುವೆ ಹೆಣ್ಣು ಮೊದಲಾದ ನಾಟಕಗಳನ್ನು ಬರೆದು ದೇಶದ ಉದ್ದಗಲಕ್ಕೂ ಪ್ರಖ್ಯಾತರಾದರು.

ಶಿವಪ್ರಕಾಶ್ ಕೃತಿಗಳು ಇಂಗ್ಲಿಷ್, ಫ್ರೆಂಚ್, ಇಟಾಲಿಯನ್, ಸ್ಪ್ಯಾನಿಶ್, ಜರ್ಮನ್, ಪೋಲಿಷ್, ಹಿಂದಿ, ಮಲಯಾಳಂ, ಮರಾಠಿ, ತಮಿಳು ಮತ್ತು ತೆಲುಗುಭಾಷೆಗಳಲ್ಲಿ ವ್ಯಾಪಕವಾಗಿ ಅನುವಾದಗೊಂಡಿದೆ. ಅವರ ನಾಟಕಗಳನ್ನು ಕನ್ನಡ, ಹಿಂದಿ, ಮೈತಿ, ರಭಾ, ಅಸ್ಸಾಮಿ, ಬೋಡೋ, ತಮಿಳು ಮತ್ತು ಮಲಯಾಳಂ ಭಾಷೆಗಳಲ್ಲಿ ಪ್ರದರ್ಶಿಸಲಾಗಿದೆ. ಜಗತ್ತಿನ ಬಹುತೇಕ ದೇಶಗಳನ್ನು ಶಿವಪ್ರಕಾಶ್ ಸುತ್ತಿದ್ದಾರೆ.

ವಚನ ಸಾಹಿತ್ಯ, ಭಾರತದ ಭಕ್ತಿ ಚಳುವಳಿಗಳು, ಹಾಗೂ ಸೂಫಿ ಪರಮಪರೆಯ ಬಗೆಗೆ ಅಧಿಕೃತವಾಗಿ ಮಾತಾಡಬಲ್ಲ ಕೆಲವೇ ಕೆಲವು ವಿದ್ವಾಂಸರಲ್ಲಿ ಶಿವಪ್ರಕಾಶ್‌ಒಬ್ಬರು.

1987ರಲ್ಲಿ ನಾನು ಮದುವೆಯಾದಾಗ ನಮ್ಮಿಬ್ಬರ ಮೇಲೆ ಬಹುಬಗೆಯ ಒತ್ತಡಗಳಿದ್ದುವು. ಯಾವ ಕ್ಷಣದಲ್ಲಿ ಏನಾದರೂ ಆಗಬಹುದಾಗಿದ್ದ ಪರಿಸ್ಥಿತಿಯಲ್ಲಿ ನಾವಿಬ್ಬರೂ ಅಂಟಿಕೊಂಡು ಕುಳಿತು ಓದಿದ್ದು ಶಿವಪ್ರಕಾಶ ಅವರ 'ಮತ್ತೆ ನೀ ಹುಟ್ಟುವುದು' ಕವಿತೆಯನ್ನು-

**'ಕೈಯ ಕೊಳ್ಳ ಮಾಡಿ**
**ಜೀವದೆಣ್ಣೆ ಬತ್ತಿ ದೀಪಗಳ**
**ಉರಿಸುತ್ತ ಕಣ್ಣಲ್ಲಿ ಸುತ್ತ**
**ನಿನ್ನ ಬರವಿನ ಹಗಲು ಇರುಳನ**
**ಗೆಜ್ಜೆಯುಲಿವಿಗೆ ಹೆಜ್ಜೆಗಳನಿಕ್ಕುತ್ತ**
**ಹೊಟ್ಟೆ ಎದೆಗಳ ಡೊಳ್ಳು ಬಾರಿಸುತ**
**ಪಾತಾಳ ಮೆಟ್ಟಿ**
**ಗೌರಿಶಂಕರ ನೆತ್ತಿ ನಡುಗುವ ಹಾಗೆ**
**ಆಗಸದ ವಿಶಾಲ ಛತ್ರಿ ಹರಿಯುವ ಹಾಗೆ'**

ಈ ತೀವ್ರತೆಯೇ ನಮ್ಮಿಬ್ಬರನ್ನು ಇದುವರೆಗೆ ಬದುಕಿಸಿದೆ. ಹೀಗೆ ಬದುಕಿಸುವ ಕವಿಯೇ ದೊಡ್ಡವನು.

ಜೆಎನ್‌ಯುವಿನಿಂದ ಶಿವೂ ನಿವೃತ್ತರಾಗುತ್ತಾರೆ,. ಆದರೆ ಅವರು ಕವಿತೆಗಳಿಂದ ನಿವೃತ್ತರಾಗುವುದೇ ಇಲ್ಲ.

*ಡಾ. ಪುರುಷೋತ್ತಮ ಬಿಳಿಮಲೆ*

# ಕರ್ನಾಟಕದ ನೂತನ ಲೋಕ

ಹದಿನೇಳನೆ ಲೋಕಸಭೆಗೆ ನೂತನ ಸದಸ್ಯರಾಗಿ ಕರ್ನಾಟಕದ 28 ಮಂದಿ ಚುನಾಯಿತರಾಗಿದ್ದಾರೆ. ಈ ಬಾರಿ ಬಿ.ಜೆ.ಪಿ. ಯಿಂದ ಸ್ಪರ್ಧಿಸಿದ ಇಪ್ಪತ್ತೆಂಟರ ಹರೆಯದ ಶ್ರೀ ತೇಜಸ್ವಿ ಸೂರ್ಯ ಮತ್ತು ಮಾಜಿ ಪ್ರಧಾನಿ ಶ್ರೀ ಹೆಚ್.ಡಿ. ದೇವೇಗೌಡ ಅವರ ಮೊಮ್ಮಗ ಇಪ್ಪತ್ತೊಂಬರ ಹರೆಯದ ಜೆ.ಡಿ.ಎಸ್. ಪಕ್ಷದ ಶ್ರೀ ಪ್ರಜ್ವಲ್ ರೇವಣ್ಣ ಆಯ್ಕೆಯಾಗಿದ್ದು ಕಿರಿಯ ವಯಸ್ಸಿನಲ್ಲೇ ಸಂಸತ್ ಪ್ರವೇಶಿಸಿದ್ದಾರೆ.

ಹಿರಿಯ ನಟಿ ಶ್ರೀಮತಿ ಸುಮಲತಾ ಅಂಬರೀಶ್ ಅವರು ಪಕ್ಷೇತರ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ್ದು ಒಂದು ಐತಿಹಾಸಿಕ ದಾಖಲೆಯಾಗಿದೆ.

ಹಿರಿಯ ರಾಜಕಾರಣಿ ಮಾಜಿ ಮುಖ್ಯಮಂತ್ರಿ ಶ್ರೀ ಡಿ.ವಿ. ಸದಾನಂದ ಗೌಡ, ಶ್ರೀ ಪ್ರಹ್ಲಾದ್ ಜೋಷಿ ಮತ್ತು ಶ್ರೀ ಸುರೇಶ್ ಅಂಗಡಿ ಅವರು ಕೇಂದ್ರದಲ್ಲಿ ಅಸ್ತಿತ್ವಕ್ಕೆ ಬಂದ ನೂತನ ಸಚಿವ ಸಂಪುಟದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.


ನೂತನ ಲೋಕಸಭಾ ಸದಸ್ಯರು ಮತ್ತು ಕರ್ನಾಟಕದಿಂದ ಕೇಂದ್ರದಲ್ಲಿ ಸಚಿವರಾಗಿ ನೇಮಕಗೊಂಡ ಜನಪ್ರತಿನಿಧಿಗಳಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು ಮತ್ತು ಶುಭಾಶಯಗಳು.



**ಡಿ.ವಿ. ಸದಾನಂದ ಗೌಡ**
*ರಸಗೊಬ್ಬರ ಮತ್ತು ರಾಸಾಯನಿಕ ಖಾತೆ ಸಚಿವರು*



**ಪ್ರಹ್ಲಾದ ಜೋಷಿ**
*ಕಲ್ಲಿದ್ದಲು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವರು*




**ಸುರೇಶ್ ಅಂಗಡಿ**
*ರೈಲ್ವೇ ಖಾತೆ ರಾಜ್ಯ ಸಚಿವರು*



ಚಿಕ್ಕೋಡಿ
**ಅಣ್ಣಾ ಸಾಹೇಬ್ ಜೊಲ್ಲೆ** (ಬಿಜೆಪಿ)



ಬಾಗಲಕೋಟೆ
**ಪಿ.ಸಿ. ಗದ್ದೀಗೌಡರ್** (ಬಿಜೆಪಿ)



ವಿಜಯಪುರ
**ರಮೇಶ್ ಜಿಗಜಿಣಗಿ** (ಬಿಜೆಪಿ)



ಕಲಬುರಗಿ
**ಉಮೇಶ್ ಜಾಧವ್** (ಬಿಜೆಪಿ)



ಹಾವೇರಿ
**ಶಿವಕುಮಾರ ಉದಾಸಿ** (ಬಿಜೆಪಿ)




ರಾಯಚೂರು
**ರಾಜಾ ಅಮರೇಶ್ ನಾಯಕ** (ಬಿಜೆಪಿ)



ಬೀದರ್
**ಭಗವಂತ ಖೂಬಾ** (ಬಿಜೆಪಿ)



ಕೊಪ್ಪಳ
**ಕರಡಿ ಸಂಗಣ್ಣ** (ಬಿಜೆಪಿ)



ಬಳ್ಳಾರಿ
**ದೇವೇಂದ್ರಪ್ಪ** (ಬಿಜೆಪಿ)


# ಸಭಾ ಸದಸ್ಯರಿಗೆ ಅಭಿನಂದನೆ


ಉತ್ತರ ಕನ್ನಡ
ಅನಂತಕುಮಾರ್ ಹೆಗಡೆ *(ಬಿಜೆಪಿ)*


ದಾವಣಗೆರೆ
ಜಿ.ಎಂ. ಸಿದ್ದೇಶ್ವರ್ *(ಬಿಜೆಪಿ)*


ಶಿವಮೊಗ್ಗ
ಬಿ.ವೈ. ರಾಘವೇಂದ್ರ *(ಬಿಜೆಪಿ)*


ಉಡುಪಿ-ಚಿಕ್ಕಮಗಳೂರು
ಶೋಭಾ ಕರಂದ್ಲಾಜೆ *(ಬಿಜೆಪಿ)*


ದಕ್ಷಿಣ ಕನ್ನಡ
ನಳಿನ್ ಕುಮಾರ್ ಕಟೀಲ್ *(ಬಿಜೆಪಿ)*


ಚಿತ್ರದುರ್ಗ
ಎ. ನಾರಾಯಣಸ್ವಾಮಿ *(ಬಿಜೆಪಿ)*


ತುಮಕೂರು
ಜಿ.ಎಸ್. ಬಸವರಾಜು *(ಬಿಜೆಪಿ)*


ಮೈಸೂರು-ಕೊಡಗು
ಪ್ರತಾಪ್‌ಸಿಂಹ *(ಬಿಜೆಪಿ)*


ಚಾಮರಾಜನಗರ
ಶ್ರೀನಿವಾಸ ಪ್ರಸಾದ್ *(ಬಿಜೆಪಿ)*


ಬೆಂಗಳೂರು ಸೆಂಟ್ರಲ್
ಪಿ.ಸಿ. ಮೋಹನ್ *(ಬಿಜೆಪಿ)*


ಬೆಂಗಳೂರು ದಕ್ಷಿಣ
ತೇಜಸ್ವಿ ಸೂರ್ಯ *(ಬಿಜೆಪಿ)*


ಚಿಕ್ಕಬಳ್ಳಾಪುರ
ಬಿ.ಎನ್. ಬಚ್ಚೇಗೌಡ *(ಬಿಜೆಪಿ)*


ಕೋಲಾರ
ಮುನಿಸ್ವಾಮಿ *(ಬಿಜೆಪಿ)*


ಬೆಂಗಳೂರು ಗ್ರಾಮಾಂತರ
ಡಿ.ಕೆ. ಸುರೇಶ್ *(ಕಾಂಗ್ರೆಸ್)*


ಹಾಸನ
ಪ್ರಜ್ವಲ್ ರೇವಣ್ಣ *(ಜೆಡಿಎಸ್)*


ಮಂಡ್ಯ
ಸುಮಲತಾ ಅಂಬರೀಶ್ *(ಪಕ್ಷೇತರ)*

# ಬದುಕು ಸಾರ್ಥಕವಾಗುವ ಬಗೆ

ಜೀವನಾವದಿ ಅಲ್ಪ, ಅದನ್ನು ಅಸ್ತವ್ಯಸ್ತಗೊಳಿಸಿಕೊಳ್ಳದಂತೆ ಅಕ್ಕರೆಯಿಂದ ಬಾಳ ಬದುಕಿ, ಶುದ್ಧ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಬದುಕಿನ ಆದರ್ಶಗಳನ್ನು ಗುರುತಿಸುವ ಪ್ರಯತ್ನ ಮೌಲಿಕವಾದುದು.ಇದು ಸಮಷ್ಠ ಹಿತ ದೃಷ್ಠಿಯುಳ್ಳವರಿಗೆ ಬೇಗ ಅರಿವಾಗುವುದು. ಜ್ಞಾನಿಗಳು ತಮ್ಮ ಸಾಧನೆಯಲ್ಲಿ ಸದಾ ನಿರತರಾಗಿರುತ್ತಾರೆ. ಮನಸಿಗೆ ಅದದ್ಭುತ ಶಕ್ತಿ ಇದೆ ಎಂದು ತಿಳದ ಜಾಗೃತಮನ ಬದುಕಿನ ನಿಯಮಿತ ರೀತಿ ನಿಶ್ಚಿತ ವ್ಯವಸ್ಥೆ ಮತ್ತು ನಿಯಮ ಶೀಲತೆಗಳಿಂದ ಸದಾ ಕ್ರೀಯಾ ಶೀಲರಾಗುವರು. ಇದನ್ನರಿಯದವರು ಅಯ್ಯೋ! ಬಿಡಿ ಇನ್ನೆಷ್ಟು ಕಾಲ ಚೆನ್ನಾಗಿ ತಿಂದು ತೇಗಿ ಇದೆ ಅಲ್ಪಾವದಿಯಲ್ಲಿ ಅಜ್ಞಾನದ ಅಮಲಿನಲ್ಲಿ ತಲ ತಲಾಂತರಕ್ಕೂ ಆಗುವಷ್ಟು ಆಸ್ತಿಪಾಸ್ತಿ ಮಾಡಿ ನಮ್ಮ ನಾಡನ್ನು ಅಪರಾದಗಳ ನಾಡು ಎಂಬ ಅಪಕೀರ್ತಿಗೆ ಒಳಪಡಿಸುವರು. ಬದುಕಿನ ಸೂತ್ರಗಳನ್ನು ಕಡೆಗಣಿಸಿ ಜೀವನ ಕ್ರಮಗಳನ್ನು ದಿಕ್ಕರಿಸಿ ಮನ ಬಂದಂತೆ ಬಾಳುವವರಿದ್ದಾರೆ. ಇದು ಅವರ ಅವಿವೇಕದ ಕೃತ್ಯಗಳು, ದುರ್ಬಲತೆಯ ಸಂಕೇತ. ಸೃಜನ ಶೀಲತೆಗಳಿಸಿ ಬದುಕನ್ನು ಸಾರ್ಥಕಪಡಿಸಿ ಕೊಳ್ಳುವರು ಸಮದರ್ಶಿತ್ವವುಳವರು. ವಿಕೃತ ಬುದ್ಧಿಯವರು ಬದುಕನ್ನು ನಾಶಪಡಿಸಿ ಕೊಳ್ಳುವರು.

ನಮ್ಮ ಭಾರತ ಅತಿಭವ್ಯವಾದ ಸಾಂಸ್ಕೃತಿಕ ಪರಂಪರೆಯುಳ್ಳ ಇತಿಹಾಸ ಮಹತ್ವವುಳ್ಳ ಮಹಾನಾಡು.ದಾರ್ಶನಿಕರು, ಉಜ್ವಲ ದೇಶಪ್ರೇಮಿಗಳು ಬಾಳ ಬೆಳೆದ ಮಹಾನಾಡು ದೇಶವೇ ಗುಡಿ, ದೇಶಕ್ಕಾಗಿ ದುಡಿ ಎಂದು ಸಾರಿ ಹೇಳದ ಮಹಾಪುರುಷರ ಭವ್ಯನಾಡು. ಬದುಕು ನಿರ್ಗಮಿಸುವ ಮುನ್ನ ಕಿಂಚಿತ್ತಾದರೂ ಸೇವೆ ಸಲ್ಲಿಸೋಣವೆಂಬ ಕಾಯಕ ರತ್ನರ ನೆಲೆ ಬೀಡು." ಒಳ್ಳೆಯ ಜನರು ತಮ್ಮ ಶಕ್ತಿಯನ್ನು ಸದಾ ಹೆಚ್ಚಿಸಿ ಕೊಳ್ಳುತ್ತಾರೆ ಎಂದು ಕನ್ ಪ್ಯೂಶಿಯಸ್ ಹೇಳದ್ದಾರೆ. ಹಾಗೆಯೇ ಗಯಾಟೆಯವರು "ನಾವು ಏನನ್ನು ಪ್ರೀತಿಸುವೆವೊ ಅದೇ ನಮ್ಮನ್ನು ರೂಪಿಸುತ್ತದೆ." ಎಂದು ಹೇಳರುವರು. ನಮಗೆ ಬೇಕಾಗಿರುವುದು ಬದುಕನ್ನು ಶ್ರೀಮಂತಗೊಳಸುವ ವಿವೇಕದ ಖಜಾನೆ ಬದುಕಿನ ದಾರಿಯ ಬಗ್ಗೆ ಬದುಕಿನ ಅನುಭವಗಳು ಮತ್ತು ಮಾನವೀಯ ದೃಷ್ಟಿಕೋನದ ಜೀವಂತ ತುಡಿತಗಳು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ವ್ಯಾಪಕವಾಗಿ ಚಿತ್ರಿತಗೊಂಡಿವೆ. ನೋವು ನಲಿವುಗಳಿಂದ ಕೂಡಿರುವ ಬದುಕಿನ ವಿವಿಧ ಮುಖಗಳು ವೈವಿದ್ಯಮಯವಾಗಿವೆ.ನಿಂತ ಗಡಿಯಾರವು ದಿನಕ್ಕೆರಡು ಸಾರಿ ವೇಳೆ ತೋರಿಸುತ್ತದೆ ವೆಂಬುದರಿಂದ ಪ್ರೇರಣೆ ಪಡೆಯುತ್ತಾ ನಮ್ಮ ಸೃಜನ ಶೀಲತೆ ಕ್ರಿಯಾಶೀಲರಾಗಬೇಕು. ಅಂದರೆ ಬದುಕು ಪರಿವರ್ತನೆಗೆ ಅವಕಾಶಗಳಿವೆ ಎಂಬುದರ ನಿದರ್ಶನವಾಗಿದೆ. ಈ ಆಧುನಿಕ ಸಂಕೀರ್ಣ ಪ್ರಪಂಚದಲ್ಲಿ "ನಾವು ಕಂಡ ಬೆಳಕು ಮತ್ತೊಬ್ಬರಿಗೂ ಬೆಳಕಾಗಬೇಕು". ಎಂಬ ಠಾಗೂರರ ಆಶಯ ಎಲ್ಲರಲ್ಲಿಯೂ ಮೂಡಬೇಕು. ಆಗ ಮನ ಅರಳುತ್ತದೆ, ಚೇತನ ಕೆರಳೂತ್ತದೆ, ಬುದ್ಧಿ ಬೆಳೆಯುತ್ತದೆ.

ಬಿರುಗಾಳ, ಬರಗಾಲ ತಂದ ಅನೇಕಾನೇಕ ಬದುಕಿನ ಬವಣೆಗಳನ್ನು ಎದುರಿಸುವಂತ ಆತ್ಮ ಸ್ಥೈರ್ಯಗಳಿಸಿಕೊಳ್ಳಬೇಕು. "ಕಹಿ ಅನುಭವವೇ ಕಲ್ಯಾಣದ ಮೆಟ್ಟಿಲು" ಎಂಬ ಗಾದೆಯನ್ನು ಸ್ಮರಿಸಬೇಕು.

**"ಗೌರವಿಸು ಜೀವನವ, ಗೌರವಿಸು ಚೇತನವ**
**ಆರದೋ ಜಗವೆಂದು ಭೇದವೆಣಿಸದಿರು**
**ಹೋರುವುದೆ ಜೀವನ ಸಮೃದ್ಧಿಗೋಸುಗ ನಿನಗೆ**
**ದಾರಿಯಾತ್ಮೋನ್ನತಿಗೆ"**
**–ಮಂಕುತಿಮ್ಮ**

ಎಂಬ ಡಿವಿಜಿಯವರ ನುಡಿ ಎಲ್ಲರಲ್ಲೂ ಮಾರ್ಧನಿಸುವಂತಾಗಬೇಕು.ಇಂದಿನ ಆಧುನಿಕ ಜಗತ್ತಿನಲ್ಲಿ ಬದುಕಿನ ಸಂಕೀರ್ಣತೆ ಬಾಳನ್ನು ಒಂದು ಹೋರಾಟವಾಗಿಸಿದೆ. ಅಭದ್ರ ಬದುಕಿನಿಂದ ಬದುಕು ದುರ್ಬಲಗೊಳ್ಳುತ್ತಿದೆ. ಬಾಳಿನ ತೊಡಕು ತಿಣುಕುಗಳು ಆಧುನಿಕ ಬದುಕಿನ ಒತ್ತಡಗಳು ಅನಿವಾರ್ಯತೆಗಳು ಬದುಕಿನ ಕತ್ತಲೆಗೆ ದೂಡಿದೆ. ಅಂದ ಮಹಿಳೆ ಹೆಲೆನ್ ಕಿಲರ್ ತನ್ನ ಬದುಕಿನ್ನು ಸಾರ್ಥಕಪಡಿಸಿಕೊಂಡ ರೀತಿ ವಿಶ್ವಕ್ಕೆ ಸವಾಲಾಗಿದೆ.

ಸಾರ್ಥಕ ಬದುಕು, ಆದರ್ಶ ಜೀವನ, ತಾಳ್ಮೆ, ಆರೋಗ್ಯ, ದ್ವೇಶ ರಹಿತ ಬದುಕು, ಶಿಸ್ತು, ಪ್ರಾಮಾಣಿಕತೆ, ದ್ಯಾನ ಮೂದಲಾದ ಅಭಿಜಾತ ಅಂಶಗಳು ಬದುಕನ್ನು ಹಾಳು ಮಾಡುವ ಅನಾರೋಗ್ಯಕರ ಹವ್ಯಾಸಗಳ ಬಗ್ಗೆ ಜಾಗೃತರಾಗಿರಬೇಕು. ಪಾರದರ್ಶಕವಾಗಿಯೂ ವಸ್ತುನಿಷ್ಟವಾಗಿಯೂ ಇರಬೇಕು. ಸಕಾರಾತ್ಮಕ ಚಿಂತನೆಗಳನ್ನು ಬೆಳೆಸಿಕೊಂಡರೆ ಸೇವೆ ಎಂಬುದು ಬದುಕಿನ ಪ್ರಮುಖ ಮೌಲ್ಯ ಎಂಬ ಅರಿವು ಉಂಟಾಗುತ್ತದೆ. ನಮ್ಮ ಹೃದಯ ಸುಂದರವಾದ ಹೂ ತೋಟವಿದ್ದಂತೆ, ಅದನ್ನು ನಿರಂತರವಾಗಿ ಸ್ವಚ್ಛಗೊಳಸಿಕೊಳ್ಳುತ್ತಿರಬೇಕು, ಸ್ವಚ್ಛತೆಯಿಂದ ವಿವಿಧ ಹೂಗಳ ಸೌಂದರ್ಯ ಅರಳುತ್ತದೆ. ಸುಂದರ ಬದುಕಿನ ವಿವಿಧ ಆಯಾಮಗಳು ವೈವಿದ್ಯತೆಗಳನ್ನು ಮೂಡಿಸಿ ಹೊಸ ಮಾರ್ಗದರ್ಶನ ನೀಡುತ್ತದೆ.

ಜಾನಪದ ಸಾಹಿತ್ಯವು ಬದುಕಿನ ಎಲ್ಲಾ ಮುಖಗಳನ್ನು ಕುರಿತು ವೈವಿದ್ಯಮಯವಾಗಿ ಚಿತ್ರಿಸಿದೆ ಗರತಿ ರಾಗಿ ಬೀಸುತ್ತ, ರೈತ ಗಾಡಿ ಹೊಡೆಯುತ್ತ, ಗಂಡು ಹೆಣ್ಣುಗಳು ನಾಟಿ ಹಾಕುತ್ತ, ಮಹಿಳೆಯರು ರಾಟೆ ತಿರುಗಿಸುತ್ತ ತಮ್ಮ ಕಾಯಕದಲ್ಲಿ ತಲ್ಲೀನರಾಗಿರುವುದು ಮೌಖಿಕ ಸಂಪ್ರದಾಯದಲ್ಲಿ ಬಂದಿದೆ. ಹೀಗೆ ಮಾನವನ ಬದುಕಿನ ಸಮಸ್ತ ವ್ಯವಹಾರಗಳು ದಾಖಲಿತವಾಗಿದೆ.

ನಮ್ಮ ಪೂರ್ವಜರು ಬದುಕಿಗೆ ಸಂಬಂಧಿಸಿದ ಹಲವಾರು ಸೂತ್ರಗಳನ್ನು ನಮಗೆ ಗಾದೆಗಳ ರೂಪದಲ್ಲಿ ಸರಳವಾಗಿ ವಿವರಿಸಿದ್ದಾರೆ. ಬದುಕಿನಲ್ಲಿ ಬೆಸೆದುಕೊಂಡು ಬಂದಿರುವ ಸೂಕ್ಮಾತಿ ಸೂಕ್ಷ್ಮ ಸಂಗತಿಗಳ ಅಧ್ಯಯನವೆ ಆಗಿದೆ. "ಉತ್ತು ಬಾಳುವವನ ಬದುಕು ಎತ್ತಲೂಲೇಸು". ಬದುಕಿಗೆ ಸಂಬಂಧಿಸಿದ ಇಂತಹ ಅನೇಕ ಸಂಗತಿಗಳು ಗಾದೆಗಳ ರೂಪದಲ್ಲಿ ಬಂದಿವೆ. ಮೃದು ಮತ್ತು ಮಧುರ ಮಾತುಗಳು ಉತ್ತಮ ವ್ಯಕ್ತಿಗಳನ್ನಾಗಿ ರೂಪಿಸುತ್ತದೆ. ನುರಿತ ಬೇಸಾಯಗಾರನಿಂದ ಮಾತ್ರ ಕೃಷಿಕಾಯಕ ಸಾಧ್ಯ. ಬೇಸಾಯ ಒಂದು ಜವಾಬ್ದಾರಿಯ ಕ್ರಿಯೆ, ಶ್ರಮ ಸಂಸ್ಕೃತಿಯ ಬದುಕನ್ನು ಹೆಚ್ಚು ಜನಪದದಲ್ಲಿ ತಿಳಿಯಬಹುದು. ಹೆಣ್ಣಿನ ಬದುಕು ಮನ ಮುಟ್ಟುವಂತೆ ವರ್ಣಿತವಾಗಿದೆ. ಬದುಕಿನ ಸತ್ಯವನ್ನು ಶೋದಿಸುವ ಕಾರ್ಯ, ಪ್ರಗತಿಪರ ವಿಚಾರಗಳು, ಜೀವನಪರ ನಿಲುವುಗಳನ್ನು ಕಾಣಬಹುದು.

ಜೀವನದುದ್ದಕ್ಕೂ ಅತ್ಯಂತ ಕ್ರಿಯಾಶೀಲನಾಗಿದ್ದ ಪ್ರಸಿದ್ಧ ನಾಟಕಕಾರ ಬರ್ನಾಡ್ ಷಾ ನ ವಿಚಾರಗಳು ರೋಚಕವಾಗಿವೆ. ತನ್ನ ತೊಂಬತ್ತನೇ ವಯಸ್ಸಿನಲ್ಲಿ ತನ್ನ ಬರಹದ ಬಗ್ಗೆ ಹೀಗೆ ಹೇಳದ್ದಾನೆ. "ಇವನು ಮುದುಕನಾಗಿದ್ದಾನೆ, ಇನ್ನಾದರೂ ಬರೆಯುವುದನ್ನು ನಿಲ್ಲಿಸಬೇಕು ಎನ್ನದಿರಿ, ಎಲ್ಲಿಯವರೆಗೂ ನಾನು ಬದುಕಿರುತ್ತೇನೊ ಅಲ್ಲಿಯವರೆಗೆ ನಾನು ಬರೆಯಲೇಬೇಕು. ಬರೆಯುವುದನ್ನು ನಿಲಿಸಿದ ತಕ್ಷಣ ಬದುಕಲೂ ಏನೂ ಇಲ್ಲದವರಂತೆ ನಾನು ಸಾಯಬೇಕಾಗುತ್ತದೆ." ಎಂದು ಹೇಳದ್ದಾರೆ. ಶ್ರದ್ಧೆ ಮತ್ತು ಏಕಾಗ್ರತೆ ಕಲಿಕೆಯ ಹಂಬಲಗಳು ಬದುಕಿನ ಕೊನೆಯವರೆಗೂ ಇದ್ದೆ ಇರುತ್ತವೆ, ಸದಾ ಕ್ರಿಯಾಶೀಲವಾಗಿರುತ್ತವೆ.

ಇದು ಇವರ ಮತ್ತೊಂದು ಸ್ಮರಣೆಯವಾದ ಹೇಳಿಕೆ ಹೀಗಿದೆ, "ನನ್ನ ಪಾಲಿಗೆ ಜೀವನವೊಂದು ಚಿಕ್ಕ ಮೂಂಬತ್ತಿಯಲ್ಲ, ಅದೊಂದು ಅದ್ಭುತ ಪಂಜು ನಾನು ಅದನ್ನು ಮುಂದಿನ ತಲೆಮಾರಿಗೆ ಹಸ್ತಾಣತರಿಸುವವರೆಗೆ ಅದು ಉಜ್ವಲವಾಗಿ ಬೆಳಗುವಂತೆ ಮಾಡ ಬಯಸುತ್ತೇನೆ" ಎಂದಿದ್ದಾರೆ.

"ಪ್ರೀತಿಯೊಂದೇ ಬದುಕಿನ ಮೂಲಸೂತ್ರ, ಯಾರು ಪ್ರೀತಿಸುತ್ತಾರೋ ಅವರು ಮಾತ್ರ ಬದುಕಿರುತ್ತಾರೆ, ಯಾರು ಸ್ವಾರ್ಥಿಗಳೊ ಅವರು ಸಾಯುತ್ತಾರೆ" ಎಂದು ಸ್ವಾಮಿ ವಿವೇಕಾನಂದರ ನುಡಿ ಜೀವನದ ವ್ಯಾಖ್ಯಾನದಲ್ಲಿ ಸಮಂಜಸವಾಗಿದೆ.

ಹೀಗೆ ಬದುಕಿನ ಬಗ್ಗೆ ಹಲವಾರು ತಮ್ಮದೇ ಆದ ವ್ಯಾಖ್ಯಾನಗಳನ್ನು ಸರಳ,ಸುಲಲಿತವಾಗಿ ವಿವರಿಸಿ ಬದುಕಲು ಕಲಿಯಿರಿ, ಕಲಿಸಿರಿ ಎಂದು ಬಹಳಷ್ಟು ನೀತಿಯುಕ್ತ ಮಾಹಿತಿಗಳನ್ನು ನೀಡುತ್ತಾ ಬಂದಿದ್ದಾರೆ ಆದರೆ ಅದರ ಉಪಯುಕ್ತತೆಗಳನ್ನು ನಾವು ಪಡೆದುಕೊಳಬೇಕು. ಭಗವಂತನ ಸುಂದರ ಸೃಷ್ಟಿ ಮಾನವನ ಜೀವನ. ಅದನ್ನು ಅರ್ಥಪೂರ್ಣವಾಗಿ ಮಾಡಿ ಮುಂದಿನ ಪೀಳಿಗೆಗೆ ಪ್ರೇರಣೆ ಪ್ರೇರಕವಾಗಿರಬೇಕು ಆಗಲೇ ನಮ್ಮ ಬದುಕಿಗೆ ಒಂದು ಸಾರ್ಥಕತೆ.

*ಎಂ.ಎಸ್. ಲಾವಣ್ಯ ಬಸವರಾಜ್*

# ನನ್ನ ಜೀವನದ ಮಧುರ ನೆನಪುಗಳು

ಮರುಕಳಿಸುವ ನೆನಪಿನ ಕೈವಾಡದಲ್ಲಿ ಬದುಕುವ ರೀತಿಗೆ ಸವಿ ನೆನಪು ಕಹಿ ನೆನಪುಗಳ ಹೋರಾಟ ಮಾರ್ಗದರ್ಶನವಾಗಲೆಂಬಾಸೆ! ಹುಟ್ಟು-ಸಾವುಗಳ ಚಕ್ರದ ತಂತಿ ಕೀಳದಂತೆ ಬಾಳುವುದೇ ಮಾನವ ಧರ್ಮದ ಭರವಸೆ! ಸಹನೆ, ಸಾಮರಸ್ಯ, ಸಂತುಷ್ಟಿ, ಸಂತೋಷ, ಸಮಧಾನಗಳೆಂಬ ಪಂಚಮಂತ್ರಗಳನ್ನು ಜಪಿಸೋ ಹೇ ಮನುಕುಲ ನಿನ್ನ ಅರಿವಿಗೆ ಆಗಲಿ ಸುಖಾಂತ! ಪಥ್ಯದಾ ತತ್ವ! ತಾತ್ವಿಕ ಕರ್ಮವು ಸಾರ್ಥಕವಾದೊಡೆ ಬದುಕು ನಿರರ್ಥಕವಾಗದು ಹುಲು ಮಾನವ!

ಹುಟ್ಟುವಾಗ ತಲೆ ಮೊದಲು ಭೂಮಿ ಮುಟ್ಟಿ, ದಿನೇದಿನೇ ಕೈ ಕಾಲಾಡಿಸಿ ದೃಷ್ಟಿಸಿ ನೋಡಿ ಗುರುತಿಸಿ ನಗಲು ಪ್ರಯತ್ನಿಸಿ ಹಾಲು ಚೀಪಿ, ಜೊಲ್ಲು ಸುರಿಸಿ, ಮಗುಚಿ, ತೆವಳಿ, ಈಜುತ್ತಾ ಅಂಬೆಗಾಲಿಟ್ಟು ಪುಟ್ಟ-ಪುಟ್ಟ ಮೃದು ಕೈಗಳಿಂದ ಲೇಖಣಿಯಿಂದ ಬರೆದು ಲಂಗದ ಮೇಲೆ ಶ್ಯಾಯಿ ಇಂದ ಚಿತ್ತಾರ ಬರೆದು, ಪಿಸು ಪಿಸು ಮಾತಿನೊಡನೆ ನಕ್ಕು ನಲಿದು ಮನೆಯಲ್ಲಿ ಧ್ರುವ, ಪ್ರಹ್ಲಾದ, ಕೃಷ್ಣರ ಪಾತ್ರ ರಚಿಸಿಕೊಂಡು ತಂದೆಯ ಮಗುಟ ಉಟ್ಟು, ಬೇಗಡೆ ರಟ್ಟು, ಜೊಳ್ಳೆ ಹುರಿಯಿಂದ ಕಿರೀಟ ಮಾಡಿ ನರಸಿಂಹ ಪಾತ್ರ, ವಿಷ್ಣು ಪಾತ್ರ ನಟಿಸಿ, ತಮ್ಮ ತಂಗಿಯರಿಗೆ ಅಕ್ಕಪಕ್ಕದ ಚೋಟುದ್ದ ಮಕ್ಕಳಿಗೆ ಪಾತ್ರ ಹೇಳಿಕೊಟ್ಟು ಮನೆಯ ಕಂಭದಿಂದ ಹಾರಿ ಬಂದು ಹಿರಣ್ಯ ಕಶ್ಯಪನನ್ನು ಕೊಲ್ಲುವ ನಾಟಕ ಮಾಡಿ (ಸ್ವರಚಿತ) ಶುರುವಾದ್ದು ಮುಂದೆ ನಾಟಕ-ಬಾಳ ನಾಟಕವನ್ನೇ-ವಿವಿಧ ಪಾತ್ರಗಳಲ್ಲಿ ನಟಿಸುತ್ತಾ, ಅಟುಗುಬ್ಬಚ್ಚಿ ಆಟದಲ್ಲಿ ಅಡಿಗೆ ಕಲಿತು ಆಟ, ಊಟ, ಓಟ ಒಂದು ತರಹ ಇದ್ದು ಬಿಟ್ಟ. ನಾನು ಹುಣಿಸೆ ಹಣ್ಣು, ಉಪ್ಪು, ಮೆಣಸಿನಕಾಯಿ, ಚಪ್ಪಟೆ ಕಲ್ಲು (ಬೀದಿಯಲ್ಲಿ ಬಿದ್ದ) ಮೇಲೆ ಅರೆದು

ನಾನು ಹದಿನೆಂಟುವರೆ ವಯಸ್ಸಿಗೆ ಮದುವೆ ಆಗಿ ಅತ್ತೆ-ಮಾವಂದಿರ ಮನೆ ವಲಸೆ ಎಲ್ಲಾ "ಕಾಶಿ"ಯಾಗಿದ್ದ ಕಾರಣ ದೊಡ್ಡ ಮಗ ಹುಟ್ಟಿದ ಒಂದು ವರುಷಕ್ಕೆ ಬಿ.ಎಚ್.ಯು.ನಲ್ಲಿ ಸಸ್ಯಶಾಸ್ತ್ರದಲ್ಲಿ ಎಂ.ಎಸ್ಸಿ. ಮಾಡಲು ಮನೆಯವರೆಲ್ಲರ ಪ್ರೋತ್ಸಾಹ ದೊರೆತಿದ್ದು ನನ್ನ ಅದೃಷ್ಟವಾಗಿ ಓದಲು ಶುರುಮಾಡಿ, ಎರಡನೇ ಮಗ ಹುಟ್ಟುವ ಸಮಯದಲ್ಲಿ ಪಿ.ಹೆಚ್.ಡಿ. ಮಾಡಲು ಸೇರಿ ಕಾಶಿಯಲ್ಲಿ 1958 ರಿಂದ 1969ರವರೆಗೆ ಕಾಶಿಯಲ್ಲಿದ್ದು, ಬಿ.ಹೆಚ್.ಯು.ನ ಮಹಿಳಾ ವಿದ್ಯಾಲಯ ಮತ್ತು ಸಸ್ಯಶಾಸ್ತ್ರದ ಡಿಪಾರ್ಟ್‌ಮೆಂಟ್‌ನಲ್ಲಿ ಅಧ್ಯಾಪಕಳಾಗಿ ಆರು ವರುಷ ಕೆಲಸ ಮಾಡಿ ನಂತರ 1970 ರಿಂದ 2004ವರೆಗೆ ದೆಹಲಿ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿ ಪಾಠಮಾಡಿ ನಿವೃತ್ತಳಾದೆ. ಇದೇ ಮಧ್ಯದಲ್ಲಿ ಜೆ.ಎನ್.ಯು.ನಲ್ಲಿ



**ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮವೊಂದರಲ್ಲಿ ಕಲಾವಿದನನ್ನು ಗೌರವಿಸುತ್ತಿರುವ ಡಾ. ಅಹಲ್ಯಾಚಿಂತಾಮಣಿ. ಒಂದು ಹಳೆಯ ಚಿತ್ರ**

ತಾರಮಯ್ಯ ಮಾಡಿ ಕಿಲಕಿಲ ನಗುತ್ತಾ ಪುಟ್ಟ-ಪುಟ್ಟ ಹೆಜ್ಜೆಗಳನ್ನು ಸೊಟ್ಟು-ಸೋಟಾಗಿಟ್ಟು ದಿಟ್ಟಳಾಗಿ ನಡೆದು ಬಚ್ಚಿಟ್ಟುಕೊಂಡು ಆಗಾಗ್ಗೆ "ತೋಚ" ಎಂದು ಕತ್ತು ತಿರುಗಿಸಿ "ಹಿಡಿ ಹಿಡಿ ಎಂಬಾಟ"ವಾಡಿ ಬೆಳೆದ ಬೊಂಬೆ ಧ್ವನಿ ಏರಿಸುತ್ತಾ ಕೂಗುತ್ತಾ "ಕುಂಟಾ ಪಿಲ್ಲೆ", ಚೌಕಾ ಭಾರ" 5-7 ಗಜ್ಜುಗದಾಟ, ಕಲ್ಲಾಟ, ಹಲುಗಳ ಮಣೆ ಆಡಲಿಕ್ಕೆ ಕಲಿತು, ನಕಲು, ಛದ್ಮವೇಷದಿಂದ ಅಜ್ಜಿಯರನ್ನು ಗೋಲು ಹುಯ್ದುಕೊಂಡು, ಸಗಣಿಯಿಂದ ನೆಲ ಸಾರಿಸಿ ರಂಗೋಲಿ ಹಾಕಲು ಕಲಿತು, ಮರ ಹತ್ತಿ ಹುಣಿಸೆ, ಮಾವು, ಸೀಬೆ ಕೀಳುತ್ತಾ ಬಿದ್ದು-ಎದ್ದು, ಸಂಪಿಗೆ, ಮಲ್ಲಿಗೆ ಸುರಭಿ ಹೂಗಳನ್ನು ತಂದು ಪೋಣಿಸಿ, ಸ್ನೇಹಿತೆಯರೊಡನೆ, ಉಡಿಗೆ-ತೊಡಿಗೆ, ಹೂವು, ಬಳೆ, ಲೋಲಕ್, ಗೆಜ್ಜೆ ಹಾಕಿ ಹೆಮ್ಮೆಯಿಂದ ಬೀಗಿ, ಶಿಶುವಿಹಾರದಲ್ಲಿ ಮರಳಲ್ಲಿ ಅಕ್ಷರ ತಿದ್ದಿ, ಸೀಸದ ಕಡ್ಡಿ, ದೌವತಿ ಹಂಚಿಕಡ್ಡಿಗೆ ಗುಂಡಗೆ ಟೋಪಿಯಂತೆ ಹಾಕಿ, ಈಗಿನ ಲಾಲಿ-ಪಾಪ್‌ನಂತೆ ಚೀಪಿದ್ದೇ ಚೀಪಿದ್ದು, ಆಗಲೇ ಪುಳ್ಳಂಪಚ್ಚೆ ಸೊಪ್ಪಿನ ಚಟ್ನಿ, ನೆಲ್ಲಿಕಾಯಿ, ಮಾವಿನಕಾಯಿ ಬೇವಿನ ಹಣ್ಣೋ ಎಲ್ಲಾ ಸಿಕ್ಕಾಪಟ್ಟೆ ತಿಂದಿದ್ದೇ ತಿಂದು "ಇಮ್ಯುನಿಟಿ" ಹೊಂದಿದೆ ಈ ಶರೀರ!

ಅಬ್ಬಬ್ಬಾ ಏನೆಲ್ಲಾ ಗಮ್ಮತ್ತು, ಕೆರೆಯಲ್ಲಿ ಬಟ್ಟೆ ಒಗೆದು ನೆಲ ಬಾವಿಯಲ್ಲಿ ನೀರು ಸೇದಿ, ಒಣಗಿದ ಬಟ್ಟೆಗಳನ್ನು ಚೆನ್ನಾಗಿ ಮಡಿಸಿ ಹಾಸಿಗೆ ಕೆಳಗೆ ಇಸ್ತ್ರಿಯಾಗುವಂತೆ (ನಮ್ಮಜ್ಜಿ ಹೇಳಿಕೊಟ್ಟಿದ್ದು) ಶಿಶುವಿಹಾರದಿಂದ ಪಿ.ಹೆಚ್.ಡಿ.ವರೆಗೂ ನಾನು ಹೆಣ್ಣು-ಗಂಡು ಶಾಲೆಗಳಲ್ಲೇ ಓದಿದ ಕಾರಣ ನಿಸ್ಸಂಕೋಚದ ವರ್ತನೆ ಬೆಳೆಸಿಕೊಂಡಿದ್ದು ಯಾವ ವಿಷಯಕ್ಕೂ ಸಕಾರಾತ್ಮಕವಾಗಿ ತಿಳಿದು ಅರಿತು ನಡವಳಿಕೆ ಉಳಿಸಿಕೊಂಡಿದ್ದು, ಇದೆಲ್ಲಾ ನನ್ನ ಜೀವನದ ಪಾಠಗಳಾಯಿತು.

ಸಂಶೋಧನೆ ಮತ್ತು ಪೋಸ್ಟ್ ಡಾಕ್ಟರೇಟ್ ಆಗಿ ಕೆಲಸ ಮಾಡಿದೆ. ಇದೆಲ್ಲಾ ನನ್ನ ಜಾತಕದಲ್ಲಿ ಬರೆದಿತ್ತೇನೋ ಗೊತ್ತಿಲ್ಲ. ಅಂತೂ ನಾನು ವೃತ್ತಿ-ಪ್ರವೃತ್ತಿ ಎರಡನ್ನೂ ಸಾಧಿಸಲು ಪ್ರಯತ್ನ ಮಾಡಿದೆ. "ಗೃಹಿಣಿ" ಎಂಬ ಶಬ್ಧದ ಜೀವನವನ್ನು ಅರ್ಥಪೂರ್ಣವಾಗಿ, ಕಳಕಳಿಯಿಂದ ಒಕ್ಕುಟುಂಬದಲ್ಲಿ ನಿಭಾಯಿಸಿದೆ. ಈಗಲೂ ನನಗೆ ಮನೆ, ಸಂಘ-ಸಂಸ್ಥೆಗಳಲ್ಲಿ ಆಸಕ್ತಿ ಜಾಸ್ತಿ. ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಅಳಿಯಂದಿರು ಎಲ್ಲರೂ ಬಹಳ ಉತ್ಸಾಹ ಮತ್ತು ಹೆಮ್ಮೆಯಿಂದ ನನ್ನನ್ನು ನೋಡಿಕೊಳ್ಳುತ್ತಾರೆ.

ನನ್ನ ಸ್ನೇಹಿತ ಬಳಗವಂತೂ ಅಮಿತ! ಎಲ್ಲರೂ ಪ್ರೀತಿ ವಿಶ್ವಾಸಗಳಿಂದ ಮಾತಾಡುತ್ತಾರೆ. ನನ್ನ "ಇದುವೆ ಜೀವ ಇದು ಜೀವನ" ಪವನದಂತೆ ಪಾವನ!

***ಡಾ. ಅಹಲ್ಯಾಚಿಂತಾಮಣಿ***

# ಉನ್ನತ ಶಿಕ್ಷಣದ ಪಿತಾಮಹ ಎನ್.ಟಿ. ಹೆಗಡೆ

**ನಮ್ಮ ನಾಡಿನ ಹೆಸರಾಂತ ಶಿಕ್ಷಣ ಸಂಸ್ಥೆಗಳಲ್ಲಿ ಉತ್ತರಕನ್ನಡ ಜಿಲ್ಲೆಯ ಕುಮಟಾದ ಡಾ. ಎ.ವಿ. ಬಾಳಿಗಾ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯವೂ ಒಂದು. ಇದೀಗ ಈ ಹೆಮ್ಮೆಯ ಸಂಸ್ಥೆ ಅಮೃತಮಹೋತ್ಸವ ಆಚರಿಸುವ ಸಡಗರದಲ್ಲಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರ ತ್ಯಾಗಶೀಲ ಕೊಡುಗೆಗಳನ್ನು ಲೇಖಕ ರಾಮಚಂದ್ರ ಗಣೇಶ ಭಟ್ಟ ಅವರು ಇಲ್ಲಿ ಸ್ಮರಿಸಿದ್ದಾರೆ.**

**-ಸಂಪಾದಕ**



**ಎನ್.ಟಿ. ಹೆಗಡೆ**

ಈ ಲೋಕದಲ್ಲಿ ತನಗಾಗಿ ಯಾವನು ತಾನೇ ಬದುಕುವುದಿಲ್ಲ? ಆದರೆ ಪರೋಪಕಾರಕ್ಕಾಗಿ ಯಾವನು ಬದುಕಿರುತ್ತಾನೋ ಅವನ ಬದುಕೇ ನಿಜವಾದ ಬದುಕು. ಹೀಗೆ ಪರೋಪಕಾರಕ್ಕಾಗಿ ತಮ್ಮ ಜೀವ ಸವೆದವರಲ್ಲಿ ದಿವಂಗತ ಎನ್.ಟಿ. ಹೆಗಡೆ ಅಗ್ರಗಣ್ಯರು. ಅಂಥ ಮಹಾತ್ಮ ದಿವಂಗತ ಎನ್.ಟಿ. ಹೆಗಡೆ ಕುಮಟಾ-ಹೊಲನಗದ್ದೆ ಮೂಲದವರಾಗಿ ಕುಮಟಾ ಕಾಲೇಜು ರಸ್ತೆಯಲ್ಲಿ ನೆಲೆಸಿದ್ದು ನಮ್ಮನ್ನಗಲಿ ದಿವ್ಯಲೋಕ ಸೇರಿಯೇ ಎಪ್ಪತ್ತೆರಡು ವರ್ಷಗಳು ಕಳೆದಿವೆ.

ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ಪೊಲೀಸ್ ವಿಭಾಗದಲ್ಲಿ ಪೊಲೀಸ್ ಪ್ರೊಸಿಕ್ಯೂಟರ್ ಹುದ್ದೆಯಲ್ಲಿ ಸೇವೆ ಸಲ್ಲಿಸಿ 1939ರಲ್ಲಿ ನಿವೃತ್ತರಾದರು. ನಂತರ ಅವರ ಜೀವನದ ಗುರಿ ಸಮಾಜ ಸೇವೆ, ಈ ಗುರಿ ಸಾಧಿಸಲು ಅವರು ಆಯ್ಕೆ ಮಾಡಿದ ಕ್ಷೇತ್ರ ಕುಮಟಾ ತಾಲೂಕು.

1940 ರಿಂದ 1950ರ ದಶಕದಲ್ಲಿ ಉತ್ತರ ಕನ್ನಡ ಜಿಲ್ಲಾ ಕುಮಟಾ ತಾಲೂಕಿನಲ್ಲಿ ಬಹುಸಂಖ್ಯಾತ ಹವ್ಯಕರು ಚಿಕ್ಕ ಚಿಕ್ಕ ಕೃಷಿ ಭೂಮಿ ಹೊಂದಿದ್ದರು. ಇದರಿಂದ ಒಂದೆಡೆ ನಿರುದ್ಯೋಗ ಸಮಸ್ಯೆ ಮತ್ತೊಂದೆಡೆ ಬಡತನದ ಬೇಗೆ ತಾಂಡವವಾಡುತ್ತಿತ್ತು. ದಿ. ಎನ್.ಟಿ.ಹೆಗಡೇರು ಈ ಸಮಸ್ಯೆ ಬಗೆಹರಿಸಲು ಸಂಘಟನೆಯೊಂದೇ ದಿವ್ಯಮಂತ್ರವೆಂತ ತಿಳಿದು 1938-39 ರಲ್ಲಿಯೇ ಹವ್ಯಕ ವಿದ್ಯಾವರ್ಧಕ ಸಂಘ ಸ್ಥಾಪಿಸಿ ಅತ್ಯಂತ ಪ್ರಾಮಾಣಿಕವಾಗಿ ನಿಷ್ಠೆಯಿಂದ ತ್ಯಾಗಶೀಲರಾಗಿ ದುಡಿದರು. ಹೀಗಾಗಿ ಅವರು ನಮ್ಮೆಲ್ಲರಿಗೂ ಪ್ರಾತಃಸ್ಮರಣೀಯರು. ಎನ್.ಟಿ. ಹೆಗಡೆ ವೈಯಕ್ತಿಕ ನೆಲೆಯಲ್ಲಿ ತಮ್ಮ ಮನೆಯಲ್ಲಿಯೇ ಬಡ ವಿದ್ಯಾರ್ಥಿಗಳಿಗೆ ವಾರಾನ್ನ ನೀಡುತ್ತಿದ್ದರು ಹಾಗೂ ಸಂಘದಿಂದ ಬಡ ವಿದ್ಯಾರ್ಥಿಗಳಿಗೆ ಓದಿ ಪರೀಕ್ಷೆಯ ನಂತರ ವಾಪಸ್ ನೀಡುವ ಷರತ್ತಿನ ಮೇಲೆ ಪುಸ್ತಕ ಹಂಚುತ್ತಿದ್ದರು. ಹೀಗೆ ನಮಗೆಲ್ಲರಿಗೂ ಅವರು ಮಹಾದಾನಿಯಾಗಿ ಕಂಡಿದ್ದಾರೆ.

ಅವರ ಎತ್ತರದ ನಿಲುವು, ಆಕರ್ಷಣೀಯ ವ್ಯಕ್ತಿತ್ವವನ್ನು ನಾನೆಂದೂ ಮರೆಯಲಾರೆ. ಹೀಗೆ ಇವರು ಸಮಾಜದ ಅಭ್ಯುದಯಕ್ಕಾಗಿ ಕಾಯಾ-ವಾಚಾ-ಮನಸಾ ಸಂಘಟನೆಯನ್ನು ಸಂಕಲ್ಪಿಸಿ 1939 ನೇ ಇಸ್ವಿ ವಿಜಯಾ ದಶಮಿ ಶುಭ ಮುಹೂರ್ತದಲ್ಲಿ ಜನರ ಸರ್ವ ಸಂಪತ್ ಸಮೃದ್ಧಿಗೆ ವಿದ್ಯಾರ್ಜನೆಯೇ ಪ್ರಧಾನವೆಂತ ಗುರುತಿಸಿ ವಿದ್ಯಾರ್ಥಿಗಳಿಗೆ ಸಹಾಯಧನ ನೀಡಲು "ಕುಮಟಾ ತಾಲೂಕು ಹವ್ಯಕ ವಿದ್ಯಾವರ್ಧಕ ಸಂಘವನ್ನು" ಅತೀ ಹೆಚ್ಚಿನ ಮೊತ್ತ ರೂ. ಐದುನೂರು ದಾನವಾಗಿ ನೀಡಿ, ಇನ್ನಿತರ ಸಮಾನ ಮನಸ್ಕರ ಸಹಾಯ, ಸಹಕಾರ ಸೂಚನೆ, ಆರ್ಥಿಕ ನೆರವಿನೊಂದಿಗೆ ಸ್ಥಾಪಿಸಿದರು. ಈ ಸಂಸ್ಥೆ ಇಂದು ಸ್ಥಿರತೆ ಹೊಂದಿ 80ನೇ ವರ್ಷಕ್ಕೆ ಕಾಲಿಟ್ಟು ನಿಂತಿದೆ. ಹೀಗೆ ಈ ಸಂಸ್ಥೆ ಬೆಳೆಯಲು ಹೆಗಡೆಯವರ ಅವಿಶ್ರಾಂತ ಪರಿಶ್ರಮವೇ ಕಾರಣ.

ಆ ಕಾಲದಲ್ಲಿ ವಿದ್ಯುತ್ತಿಲ್ಲ, ವಾಹನ ಸೌಕರ್ಯವಿಲ್ಲ, ದೂರವಾಣಿ ಸಂಪರ್ಕವಿಲ್ಲ, ಉತ್ತಮ ಮಾರ್ಗವಿಲ್ಲದಾಗ ತಮ್ಮ ಊರುಗೋಲಿನ ಸಹಾಯದಿಂದ ಸಾರ್ವಜನಿಕ ಬಸ್ಸಿನಲ್ಲಿ, ರೈಲ್ವೆಯಲ್ಲಿ ಹಾಗೂ ನಡೆದು ಹೋಗಿಯೇ ದಾನಿಗಳನ್ನು ಸಂಪರ್ಕಿಸಿ, ಧನಸಂಗ್ರಹ ಕೈಗೊಂಡಿದ್ದು ಅಸಾಧಾರಣ ಹಾಗೂ ಅದ್ವಿತೀಯ ಸಾಧನೆ. ಅವರ ತ್ಯಾಗಕ್ಕೆ ನಾವೆಲ್ಲ ಮಣಿದು ಸ್ಫೂರ್ತಿ ಹೊಂದಿ ಗೌರವಿಸಿ, ಆ ದಿಶೆಯಲ್ಲಿ ನಾವು ಸಾಗಬೇಕು. ಅವರು ಸ್ಥಾಪಿಸಿದ ಈ ಸಂಸ್ಥೆಯನ್ನು ಆರ್ಥಿಕವಾಗಿ ಬಲಪಡಿಸಿ ಅರ್ಹ ವಿದ್ಯಾರ್ಥಿಗಳಿಗೆ ಹೆಚ್ಚಿನ ಮೊತ್ತದ ಆರ್ಥಿಕ ನೆರವು ನೀಡಲು ಬೇಕಾದ ಸಂಪನ್ಮೂಲಗಳನ್ನು ತ್ಯಾಗದಿಂದ ಬೆಳೆಸೋಣ. ಹೀಗೆ 1946-47ರ ಹೊತ್ತಿಗೆ ಅವರ ಸಮಾಜಸೇವಾ ಕ್ಷಿತಿಜ, ಸರ್ವ ವರ್ಗದ ಜನರ



**ಕುಮಟಾದ ಎ.ವಿ. ಬಾಳಿಗಾ ಕಲಾ**

ಅಭ್ಯುದಯದ ಕಡೆಗೆ ತಿರುಗಿತು. ಈ ತಿರುವು ನಾವೆಲ್ಲ ಗ್ರಹಿಸಲೇಬೇಕು.

ಹೀಗೆ ದಿ. ಎನ್.ಟಿ. ಹೆಗಡೆಯವರು ತಮ್ಮ ತ್ಯಾಗ ಜೀವನವನ್ನು ನಿರಂತರ ಮುಂದುವರೆಸಿ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲು, ಸಂಪನ್ಮೂಲಕ್ಕಾಗಿ ಬಂಧುಗಳ ಮನೆಯಲ್ಲಿ ನಡೆಯುವ ಶುಭ ಕಾರ್ಯದ ಸಂದರ್ಭ ಕನಿಷ್ಠ ನಾಲ್ಕಾಣೆ ನೆರವಿಗೆ ಪಾವತಿ ಪುಸ್ತಕಗಳನ್ನು ಮುದ್ರಿಸಿ ಜನರಿಂದ ದೇಣಿಗೆ ಸಂಗ್ರಹಿಸುತ್ತಿದ್ದರು. ಅಲ್ಲದೇ ತೇರು/ಜಾತ್ರೆಗಳಲ್ಲಿ ವಿದ್ಯಾರ್ಥಿಗಳಿಗೆ, ಯುವಕರಿಗೆ ಕಾಣಿಕೆ ಡಬ್ಬಿ ನೀಡಿ ಹಣ ಸಂಗ್ರಹಿಸುತ್ತಿದ್ದರು. ಹೀಗೆ ಸಂಸ್ಥೆಯ ಕಾರ್ಯಚಟುವಟಿಕೆ ಒಂದು ದಶಕವನ್ನು ದಾಟುವ ಹೊಸ್ತಿಲಿನಲ್ಲಿ ಅವರು ಜನ ಸಾಮಾನ್ಯರ ಉನ್ನತ ಶಿಕ್ಷಣಕ್ಕೆ ಕುಮಟಾ ಹಾಗೂ ಇನ್ನಿತರ ಸಮೀಪದ ತಾಲೂಕಿನ ವಿದ್ಯಾರ್ಥಿಗಳಿಗೆ ಅವಕಾಶ ಒದಗಿಸಲು ಮಧ್ಯವರ್ತಿ ಸ್ಥಳವಾದ ಕುಮಟಾದಲ್ಲಿ ಕಲಾ ಹಾಗೂ ವಿಜ್ಞಾನ ಮಹಾವಿದ್ಯಾಲಯವೊಂದನ್ನು ಸ್ಥಾಪಿಸಲು ಕಾರ್ಯಪ್ರವೃತ್ತರಾಗಿ ದೇಣಿಗೆ ಸಂಗ್ರಹಕ್ಕಾಗಿ ನಮ್ಮ ಕಲ್ಪನೆ ಮೀರಿ ಪ್ರಯತ್ನ ಕೈಗೊಂಡಿದ್ದು ಅದ್ವಿತೀಯ ಹಾಗೂ ಅಸಾಧಾರಣ.

ಆ ಕಾಲಕ್ಕೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದೇ ಒಂದು ಮಹಾವಿದ್ಯಾಲಯವಿಲ್ಲವಾಗಿತ್ತು. ಮಹಾವಿದ್ಯಾಲಯದ ಗೋಡೆಗಳನ್ನು ಒಂದು ವಿಶಿಷ್ಟ ಅಳತೆಯ ಕೆಂಪುಕಲ್ಲಿನಲ್ಲಿ ಕಟ್ಟಿಸಿದರು. ಈ ತಾಂತ್ರಿಕತೆಯ ನೆರವು ನೀಡಿದವರು ದಿ. ರಂಗೂನ ಭಟ್ರು ಎಂತ ನಾನು ಕೇಳಿ ತಿಳಿದಿದ್ದೇನೆ. ಮುಂದೆ ಈ ಅಳತೆಯ ಕಲ್ಲುಗಳು ಕಾಲೇಜು ಸೈಜು ಕಲ್ಲೆಂತಲೇ ಜನರ ವಾಡಿಕೆ ಮಾತಿನಲ್ಲಿ ಪ್ರತಿಬಿಂಬಿಸಿತು. ದೂರ ದೂರ ಪ್ರದೇಶಗಳಾದ ಪುಣೆ ಹಾಗೂ ಮುಂಬೈ ನಗರಗಳಲ್ಲಿಯ ದಾನಿಗಳನ್ನು ಗುರುತಿಸಿ ಹಣ ಸಂಗ್ರಹಿಸುವ ಕಾರ್ಯಗಳನ್ನು ತಮ್ಮ ಸ್ವಂತ ಖರ್ಚಿನಲ್ಲೇ ಕೈಗೊಂಡರು. ಅಂತೂ ಒಳ್ಳೇ ಪ್ರಾಂಶುಪಾಲರನ್ನು ಹಾಗೂ ಉಪನ್ಯಾಸಕರನ್ನು ಗುರುತಿಸಿ 1949ರಲ್ಲಿ "ಕೆನರಾ ಕಾಲೇಜು" ಸ್ಥಾಪನೆಗೆ ಕಾರಣೀಭೂತರಾದರು.

ಮಹಾ ವಿದ್ಯಾಲಯದ ಕಟ್ಟಡಕ್ಕೆ ಕೆಂಪು ಕಲ್ಲು ಸಿಗುವ ಜಾಗಾ ಗುರುತಿಸಿ ಸರಕಾರದಿಂದ ಮಂಜೂರಿ ಪಡೆದು ಈ ವಿಶಾಲ ಜಾಗದಲ್ಲಿ ಕೆಂಪು ಕಲ್ಲು ಕೊರೆಸಿ ಅಲ್ಲಿಯೇ ಕಟ್ಟಡಕ್ಕೆ ಬೇಕಾದ ಕೆಂಪು ಕಲ್ಲುಗಳನ್ನು ಒದಗಿಸಿ ಹೊಂಡಬಿದ್ದ ಜಾಗದಲ್ಲಿ ಉಪನ್ಯಾಸಕರ ಕೊಠಡಿಗಳಿಗೆ ನೆಲಮಾಳಿಗೆ ಕಟ್ಟಡ ಎಬ್ಬಿಸಿದರು. ಈಗಲೂ ನಾವು ಜಾಗದ ಸಮೀಕ್ಷೆ ಮಾಡಿದರೆ ಅವರ ದೂರದರ್ಶಿತ್ವ ತಿಳಿಯಬಹುದು. ಇದೆಂಥ ದೂರದೃಷ್ಟಿ ಎಂತ ನೀವೇ ಪರಾಂಬರಿಸಿ ನೋಡಿ.

ಅರಣ್ಯ ಇಲಾಖೆಯ ಸಾಗ್ವಾನಿ ನಾಟುಗಳ ಹರಾಜಿನಲ್ಲಿ ಯಾರೂ ಸವಾಲಿಗೆ ನಿಲ್ಲದಂತೆ ವಿನಂತಿಸಿ ಮಹಾವಿದ್ಯಾಲಯದ ಜಂತಿ, ಪಕಾಸು, ಕಿಡಕಿ ಬಾಗಿಲುಗಳನ್ನು ಸಾಗವಾನಿ, ಮತ್ತಿ, ಜಂಬೆ ಮುಂತಾದ ಬಹುಕಾಲ ಬಾಳುವ ನಾಟುಗಳನ್ನು ಅತೀ ಕಡಿಮೆ ಸವಾಲಿಗೆ ಪಡೆದು ರೀಪು, ಪಕಾಸ, ಜಂತಿ ಮಿಲ್ಲಿನಿಲ್ಲಿ ಕೊಯ್ಸಿ ಕಟ್ಟಡ ನಿರ್ಮಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯ ಮಹಾದಾನಿ, ಮುಂಬೈನ ಹೆಸರಾಂತ ಸುಪ್ರಸಿದ್ಧ ಸರ್ಜನ್ ಡಾ. ಎ.ವಿ. ಬಾಳಿಗಾರವರು ಬೃಹತ್ ಮೊತ್ತದ ರೂಪಾಯಿ ಒಂದು ಲಕ್ಷ ಆ ಕಾಲಕ್ಕೆ ನೀಡಿದ್ದರಿಂದ ಕೆನರಾ ಕಾಲೇಜು ಎಂತಲೇ ಪ್ರಸಿದ್ಧಿ ಹೊಂದಿದ್ದ ಈ ಮಹಾವಿದ್ಯಾಲಯಕ್ಕೆ ಡಾ. ಎ.ವಿ. ಬಾಳಿಗಾ ಕಲಾ ಹಾಗೂ ವಿಜ್ಞಾನ ಮಹಾವಿದ್ಯಾಲಯವೆಂತ ಮರು ನಾಮಕರಣ ಮಾಡಲಾಗಿದೆ.

ಮುಂದೆ ವಾಣಿಜ್ಯ ಕಾಲೇಜಿನ ಸ್ಥಾಪನೆಯೂ ಆಯಿತು. ಇದರಿಂದಾಗಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ಪದವಿಯ ಉನ್ನತ ಶಿಕ್ಷಣ ಲಭಿಸಿದ್ದರಿಂದ ಉನ್ನತ ಸರಕಾರಿ ಹಾಗೂ ವಿವಿಧ ಖಾಸಗಿ ಸಂಸ್ಥೆಗಳಲ್ಲಿ, ವಿದೇಶಗಳಲ್ಲಿ ಗೌರವಾನ್ವಿತ ಹುದ್ದೆಯಲ್ಲಿ ಸೇವೆ ಸಲ್ಲಿಸುವ ಅವಕಾಶ ಒದಗಿ ಬಂತು. ಅಲ್ಲದೇ ಇವರೆಲ್ಲ ಮೇಲ್ಮಟ್ಟದ ಆರ್ಥಿಕ ಸ್ಥಿತಿ ತಲುಪಲು ಸಹಕಾರಿಯಾಯಿತು. ಈ ಹಿನ್ನೆಲೆಯಲ್ಲಿ ಆದ ಬೆಳವಣಿಗೆಗಳನ್ನು ಅವಲೋಕಿಸಿದಾಗ ನಮಗೂ ಈ ಸಂಸ್ಥೆಯನ್ನು ಇನ್ನೂ ಹೆಚ್ಚು ಬಲಪಡಿಸುವ ಬಾಧ್ಯತೆ ಜೊತೆಗೆ ಈ ಎಲ್ಲ ಬೆಳವಣಿಗೆಗೆ ಕಾರಣೀಭೂತರಾದ ದಿವಂಗತ ಎನ್.ಟಿ. ಹೆಗಡೆ ವಾರ್ಷಿಕ ಸ್ಮರಣೆಯೊಂದಿಗೆ ಬಡ ವಿದ್ಯಾರ್ಥಿಗಳಿಗೆ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅವರ ಹೆಸರಿನಲ್ಲಿ ನೆರವು ನೀಡುವ ವ್ಯವಸ್ಥೆಯಲ್ಲಿ ನಾವೆಲ್ಲ ತೊಡಗಿ ಸಮಾಜದ ಋಣಭಾರವನ್ನು ಕಡಿಮೆ ಮಾಡಿಕೊಳ್ಳುವುದಲ್ಲದೇ, ಕೆಲವರಲ್ಲಿಯಾದರೂ ಪರೋಪಕಾರಿಗಳಾಗಿ, ದಾನಿಗಳಾಗಿ ಬಾಳಿ ಬೆಳಗಲು ಪ್ರಬೋಧಿಸಬೇಕಾಗಿದೆ. ಇಲ್ಲಿ ಡಾ. ಎ.ವಿ. ಬಾಳಿಗಾ ವಾಣಿಜ್ಯ, ಕಲಾ ಹಾಗೂ ವಿಜ್ಞಾನ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಬಾಧ್ಯತೆಯನ್ನು ಮತ್ತೊಮ್ಮೆ ನಾನು ಒತ್ತಿ ಹೇಳಲು ಅಪೇಕ್ಷಿಸುತ್ತೇನೆ.

ಹೀಗೆ ದಿವಂಗತ ಎನ್.ಟಿ. ಹೆಗಡೆ ಅವರ ಸಂಕಲ್ಪದಿಂದ ಮುಂದೆ ನಮಗೆ ಸಮರ್ಥವಾಗಿ, ನಿಷ್ಠೆಯಿಂದ  ಸಂಸ್ಥೆಯ ಆಡಳಿತ ನಡೆಸಲು ಲಭಿಸಿ ಸುವರ್ಣ ಮಹೋತ್ಸವವನ್ನೂ ಆಚರಿಸಿ ಇದೀಗ ಅಮೃತ ಮಹೋತ್ಸವದ ಆಚರಣೆಗೆ ನಾವೆಲ್ಲ ತೊಡಗಿದ್ದು ಅತ್ಯಂತ ಸಂತಸದ ಘಳಿಗೆ. ಎಲ್ಲರ ಸರ್ವತೋಮುಖ ಅಭಿವೃದ್ಧಿಗೆ ಭಗವಂತನು ಹರಸಲಿ ಎಂದು ಆಶಿಸುತ್ತೇನೆ.

***ರಾಮಚಂದ್ರ ಗಣೇಶ ಭಟ್ಟ ಚಿತ್ರಗಿ***

**(ಲೇಖಕರು ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರು, ಕೆನರಾ ಕಾಲೇಜಿನ ಮಾಜಿ ಉಪನ್ಯಾಸಕ ಮತ್ತು ಕರ್ನಾಟಕ ಬ್ಯಾಂಕಿನ ವಿಶ್ರಾಂತ ವ್ಯವಸ್ಥಾಪಕ)**



**ಹಾಗೂ ವಿಜ್ಞಾನ ಮಹಾವಿದ್ಯಾಲಯ**

# ಜೆ.ಎಸ್.ಎಸ್. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಬಸವ ಜಯಂತಿ



**ಕಾರ್ತಿಕದ ಕತ್ತಲಲ್ಲಿ ಆಕಾಶದೀಪವಾಗಿ**
**ನೀ ಬಂದೆ...ಹೇ ಬಸವೇಶ್ವರ. . . .**

ಎನ್ನುವ ಆಶಯ ಮತ್ತು ನಮನಗಳೊಂದಿಗೆ ಜಗಜ್ಯೋತಿ ಬಸವೇಶ್ವರರ ಜಯಂತಿ ಮಹೋತ್ಸವವನ್ನು ಜೆ.ಎಸ್.ಎಸ್. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಜೆ.ಎಸ್.ಎಸ್. ವಸತಿ ಮತ್ತು ಕ್ಷೇಮಾಭಿವೃದ್ಧಿಯ ವತಿಯಿಂದ ಸರಳ, ಸುಂದರ, ಅರ್ಥಗರ್ಭಿತವಾಗಿ ದಿನಾಂಕ 11.05.2019ರ ಶನಿವಾರ ಸಂಜೆ ಆಚರಿಸಲಾಯಿತು. ಸುಂದರ ಸಂಜೆಯ ಪಕ್ಷಿ ಕಲರವ ವೇಳೆ, ಸೂರ್ಯ ತನ್ನ ದಿನಚರಿಯ ಮುಗಿಸಿ ಬಾನೆಲ್ಲ ಕೆಂಪಾಗಿಸಿ ತೆರಳುವ ಸುಂದರ ವೇಳೆಯಲ್ಲಿ ನೂರಾರು ಶರಣರು ಒಂದೆಡೆ ಕಲೆತು ಶರಣ ಸಂಸ್ಕೃತಿ, ಆಚಾರ, ವಿಚಾರಗಳ ವಿನಿಮಯ ಮಾಡಿಕೊಂಡಂತಾಯಿತು.

ಕಾರ್ಯಕ್ರಮದಲ್ಲಿ ಜೆ.ಎಸ್.ಎಸ್. ಸಂಸ್ಥೆಯ ಸದಸ್ಯರು ಕುಟುಂಬ ವರ್ಗದ ಜೊತೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಸದಸ್ಯರು, ಕುಟುಂಬವರ್ಗ, ಬಸವ ಇಂಟರ್‌ನ್ಯಾಷನಲ್ ಸೆಂಟರ್‌ನ ಅಧ್ಯಕ್ಷರು, ಸದಸ್ಯರು ಕುಟುಂಬವರ್ಗ ಪಾಲ್ಗೊಂಡು ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನಿರಂಜನ ಪ್ರಣವ ಸ್ವರೂಪಿ ಶಾಂತ ಮಲ್ಲಿಕಾರ್ಜುನ ಸ್ವಾಮಿಗಳು, ಅತಿಥಿಗಳಾಗಿ ಬಸವ ಇಂಟರ್ ನ್ಯಾಷನಲ್ ಅಧ್ಯಕ್ಷ ಶ್ರೀ ಅಶೋಕ ಕುಮಾರ್ ಕಲ್ಲೂರುರವರು ಮತ್ತು ಅಧ್ಯಕ್ಷತೆಯನ್ನು ಜೆ.ಎಸ್.ಎಸ್. ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಗುರುಲಿಂಗಪ್ಪ ಎಂ. ಪಾಟೀಲರು ವಹಿಸಿದ್ದರು. ಜೆ.ಎಸ್.ಎಸ್. ವಸತಿ ಮತ್ತು ಕ್ಷೇಮಾಭಿವೃದ್ಧಿಯ ಅಧ್ಯಕ್ಷ ಶ್ರೀ ಉದಯ್ ಕುಮಾರ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಂಪರ್ಕ ಅಧಿಕಾರಿಗಳಾದ ರಾಜಣ್ಣನವರು, ಲೆಕ್ಕಾಧಿಕಾರಿಗಳಾದ ಶ್ರೀ ಮನೋಜ್ ಕುಮಾರ್, ನೋಂದಣಿ ಅಧಿಕಾರಿಗಳಾದ ಡಾ. ಶಿರೂರ ಎಸ್.ಎಸ್. ರವರು ಹಾಜರಿದ್ದು ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದರು.

ಕನ್ನಡನಾಡಿನಿಂದ ಸಾವಿರಾರು ಮೈಲಿಗಳಾಚೆ ಬಸವನೇ ಮಾಮರ. ಬಸವನೇ ಕೋಗಿಲೆ ಎಂಬ ಕೂಗು ಮೊಳಗಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ



ಮಾತನಾಡಿದ ಹರಗುರುಚರ ಸ್ವರೂಪಿ ಶಾಂತ ಮಲ್ಲಿಕಾರ್ಜುನ ಸ್ವಾಮಿಗಳು ಮೌಢ್ಯತೆಯ ತೊಲಗಿಸಿ, ಭಕ್ತಿ ಕಾಯಕವೆಂಬ ಬೀಜವ ಬಿತ್ತಿ, ಸದ್ಭಕ್ತ, ಸದಾಚಾರಿ ಮರಗಳ ಬೆಳೆಸಿ ಸದಾಚಾರ, ಪ್ರಾಮಾಣಿಕತೆಗಳೆಂಬ ಫಲವನ್ನು ತೆಗೆಯುವ ಕೆಲಸ ನಮ್ಮದಾಗಬೇಕೆಂದು ಕರೆ ಕೊಟ್ಟರು.

ಇಪ್ಪತ್ತೊಂದನೇಯ ಶತಮಾನದಲ್ಲೂ ನಾವು ಸಾಧಿಸಲಾಗದ ಸಾಮಾನತೆಯ ಹನ್ನೆರಡನೇ ಶತಮಾನದಲ್ಲಿಯೇ ಸಾಧಿಸಿ ತೋರಿಸಿದಾತ ಬಸವಣ್ಣ ಎಂದರು. 'ಬ್ರಹ್ಮ ಪದವಿಯನೊಲ್ಲೆ, ವಿಷ್ಣು ಪದವಿಯನೊಲ್ಲೆ, ನಿಮ್ಮ ಸದ್ಭಕ್ತ ಪಾದ ಕಮಲಗಳಲ್ಲಿ ನಾನು ನನ್ನನರಹುವೆ' ಎಂಬ ಸರಳ ವಚನ ಬಸವಣ್ಣನವರಿಗೆ ಅಧಿಕಾರದ ಮೇಲೆ ಕಿಂಚಿತ್ತು ಆಸೆ ಇರಲಿಲ್ಲವೆಂಬುದನ್ನು ತಿಳಿಸುತ್ತದೆ.

'ಸತಿ ಪತಿಗಳಂದೊಂದಾದ ಭಕ್ತಿ ಹಿತವಪ್ಪುವುದು ಶಿವಂಗೆ' ಎಂಬಂತೆ ಸಾಮರಸ್ಯದ ದಾಂಪತ್ಯ ಜೀವನದ ಅನಿವಾರ್ಯತೆಯ ತಿಳಿಹೇಳದರು. 'ಈಸಕ್ಕಿ ಆಸೆ ನಮಗೇಕೆ ಈಶ್ವರನೊಪ್ಪ'ಎಂಬ ಅಸಂಗ್ರಹ ನಡತೆ. ಹೀಗೆ ಹತ್ತು ಹಲವಾರು ವಚನಗಳ ಮೂಲಕ ಸರಳ, ಅರ್ಥಗರ್ಭಿತವಾಗಿ ಮನಮುಟ್ಟುವಂತೆ ಆಶೀರ್ವಚನ ನೀಡಿದರು. ಸದ್ಭಕ್ತಿ, ಸದಾಚಾರ, ನಿಸ್ವಾರ್ಥ, ಬರಿ ಮಾತಾಗದೆ ನಡೆಯಾದರೆ ರಾಹುತನೇ ಬಡಿದಿರುವ ವೀರಶೈವದ ಕುಲಕೆ ಬಸವಣ್ಣನೇ ದೀಪವಾಗುತ್ತಾನೆ ಎಂದರು ಶ್ರೀಗಳು.

ಅತಿಥಿಗಳಾಗಿ ಆಗಮಿಸಿದ್ದ ಅಶೋಕ್ ಕಲ್ಲೂರರವರು 'ಕಾಯಕವೇ ಕೈಲಾಸ' ಇದನ್ನೇ ನಾನು ನನ್ನ ಜೀವನದುದ್ದಕ್ಕೂ ಅಳವಡಿಸಿಕೊಂಡು ಬರುತ್ತಿದ್ದೇನೆ. ಪ್ರತಿಯೊಬ್ಬರು ವಚನಗಳ ಅಧ್ಯಯನ ಮತ್ತು ಅಳವಡಿಕೆ ಮಾಡಿಕೊಂಡರೆ ಬಸವ ಸಮಾಜದ ಮರು ನಿರ್ಮಾಣವಾಗುತ್ತದೆ ಎಂದು ತಿಳಿಸಿದರು.

ಅಧ್ಯಕ್ಷೀಯ ನುಡಿಗಳನ್ನಾಡಿದ ಜೆ.ಎಸ್.ಎಸ್.ನ ಪ್ರಾಂಶುಪಾಲರಾದ ಡಾ. ಗುರುಲಿಂಗಪ್ಪ ಎಂ. ಪಾಟೀಲರು ಸ್ವತಃ ಬಸವನ ನಾಡಿನಿಂದ ಬಂದವರಾಗಿದ್ದು ಸದಾ ಕಾಯಕದಲ್ಲಿ ಮಗ್ನರಾಗಿ ಅದರಲ್ಲೇ ದೇವರನ್ನು ಮನೋಲ್ಲಾಸವನ್ನು ಕಾಣುವುದಾಗಿ ತಿಳಿಸಿದರು. ಬಸವಣ್ಣ ಹಾಕಿಕೊಟ್ಟ ಹಾದಿಯಲ್ಲಿ ನಮ್ಮೆಲ್ಲರ ಹೆಜ್ಜೆ ಸಾಗಿದರೆ ಬಸವ ಕಲ್ಯಾಣ ನಿರ್ಮಾಣ ಸಾಧ್ಯ ಎಂದರು.

ಇದೆಲ್ಲದರ ಜೊತೆ ಜೊತೆಗೆ ಮಕ್ಕಳಿಂದ ವಚನಗಾಯನ ಸ್ಪರ್ಧೆಯನ್ನು ಆಯೋಜಿಸಲಾಯಿತು. ಮತ್ತು ಹತ್ತನೇಯ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿ ಶೇಕಡಾ 96% ಅಂಕಗಳನ್ನು ಪಡೆದ ಆರ್.ಎಸ್. ಜಗದೀಶರವರ ಪುತ್ರಿ ತೀಕ್ಷ್ಣಳಿಗೆ ಪ್ರತಿಭಾ ಪುರಸ್ಕಾರವನ್ನು ಮಾಡಿ ಪ್ರೋತ್ಸಾಹಿಸಿದರು.

ಸರ್ವರನ್ನು ಲೋಕೇಶ್‌ರವರು ಹೃದಯತುಂಬಿ ಸ್ವಾಗತಿಸಿದರೆ ಯೋಗೇಶ್‌ರವರು ಮನಃತುಂಬಿ ವಂದಿಸಿದರು. ಕು. ಗೀತಾ ಕಾರ್ಯಕ್ರಮದ ನಿರೂಪಣೆ ನಡೆಸಿಕೊಟ್ಟರು.

ಒಟ್ಟಾರೆಯಾಗಿ ಎಲ್ಲರ ಸಹಕಾರ, ಹಾಜರಿಯೊಂದಿಗೆ ಬಸವಾ ಬಸವಾ ಎಂಬ ಕೂಗು ಮೊಳಗಿತು. ಆ ಸಂಜೆ ನೂರಾರು ಶರಣ ಸಮುದಾಯದ ಮಧ್ಯದಲ್ಲಿ

**ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ**
**ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ**
**ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ**
**ಇದೇ ಕೂಡಲ ಸಂಗಮದೇವನೊಲಿಸುವ ಪರಿ.**

ಎಂಬ ವಚನ ಸಿರಿ ಕೇಳ ಬಂತು.

*ಗೀತಾ ಎಸ್.*

# ಆಶಾಲತಾ ಎಂ. ಅವರಿಗೆ ಡಿ.ಎಂ.ಆರ್.ಸಿ. ಪ್ರಶಸ್ತಿ

ದೆಹಲಿ ಮೆಟ್ರೋದಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಆಶಾಲತಾ ಎಂ. ಅವರಿಗೆ ವೃತ್ತಿಯಲ್ಲಿ ಸಲ್ಲಿಸಿದ ದಕ್ಷ ಸೇವೆಗೆ ಇತ್ತೀಚೆಗೆ 'ಡಿ.ಎಂ.ಆರ್.ಸಿ. ಮ್ಯಾನೇಜಿಂಗ್ ಡೈರೆಕ್ಟರ್' ಪ್ರಶಸ್ತಿಯನ್ನು ಉಪರಾಷ್ಟ್ರಪತಿ ಶ್ರೀ ವೆಂಕಯ್ಯ ನಾಯ್ಡು ಅವರು ನೀಡಿ ಗೌರವಿಸಿದರು. ಅವರು ದೆಹಲಿ ಮೆಟ್ರೋದಲ್ಲಿ ಸೀನಿಯರ್ ಸ್ಟೇಶನ್ ಕಂಟ್ರೋಲರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಆಶಾಲತಾ ಅವರು ಪ್ರಸ್ತುತ ದೆಹಲಿ ಕರ್ನಾಟಕ ಸಂಘದ ಖಜಾಂಚಿಯಾಗಿದ್ದಾರೆ. ಅವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.




# ಸ್ನೇಹಾ ಅಸೋಸಿಯೇಶನ್‌ನಿಂದ ಆರೋಗ್ಯ ಶಿಬಿರ

ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್ ವತಿಯಿಂದ ದಿನಾಂಕ 28.04.2019ರಂದು ನ್ಯಾಷನಲ್ ಅಸೋಸಿಯೇಸನ್ ಫಾರ್ ದಿ ಬ್ಲೈಂಡ್ (ಎನ್.ಎ.ಬಿ)ನ ಮಕ್ಕಳಿಗಾಗಿ ಆರೋಗ್ಯ ಶಿಬಿರವನ್ನು ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ. ರಾಜೀವ್ ಗರ್ಗ್, ಚೇರ್‌ಮೆನ್, ಇಂಟಿಗ್ರೇಟೆಡ್ ಡಯಾಬಿಟೀಸ್ ವೆಲ್‌ನೆಸ್ ಸೊಸೈಟಿ ತಂಡದ ಸಹಕಾರದೊಂದಿಗೆ ನೂರ ಐವತ್ತು ಮಕ್ಕಳು ಮತ್ತು ಸಿಬ್ಬಂದಿ ವರ್ಗದ ಆರೋಗ್ಯ ತಪಾಸಣೆ ಮಾಡಲಾಯಿತು. ಕಣ್ಣು, ಚರ್ಮ, ಹಲ್ಲು, ಯೋಗ, ಗೈನಾಕೋಲಾಜಿ, ಹೃದಯ, ರಕ್ತ ಕುರಿತ ತಜ್ಞರು ಬಂದಿದ್ದರು. ಉಚಿತವಾಗಿ ಮಕ್ಕಳಿಗೆ ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಕ್ಲಬ್‌ನ ಸದಸ್ಯೆಯರು ಮಕ್ಕಳ ಹೆಲ್ತ್ ಕಾರ್ಡನ್ನು ತಯಾರಿಸಿದ್ದರು.

ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನ ರಂಗಮಣಿ ರಾವ್, ರಾಜೇಶ್ವರಿ ಕಲ್ಲೂರ, ಸರೋಜ ಮಾಧವ, ಆಶಾ ಶ್ಯಾಮಸುಂದರ, ಲಕ್ಷ್ಮೀ ಕಿಣಿ, ವಿಮಲ, ತಾರಾ ರಮೇಶ ಇವರೆಲ್ಲರೂ ಸ್ವಯಂ ಸೇವಕರಾಗಿ ಕೆಲಸ ಮಾಡಿದರು. ಈ ಬಗೆಯ ಶಿಬಿರವನ್ನು ಸ್ನೇಹಾ ದೆಹಲಿ ಕನ್ನಡ ಸದಸ್ಯೆಯರು ನಾಲ್ಕನೇ ಬಾರಿ ಆಯೋಜಿಸಿದ್ದಾರೆ.

*ರಾಜೇಶ್ವರಿ ಕಲ್ಲೂರ*




ಹೊರನಾಡಿನಲ್ಲಿ ಕನ್ನಡಾಭಿವೃದ್ಧಿಗಾಗಿ ಗಣನೀಯ ಸೇವೆ ಸಲ್ಲಿಸಿದ್ದನ್ನು ಪರಿಗಣಿಸಿ ದೆಹಲಿ ಕನ್ನಡಿಗ ಪತ್ರಿಕೆಯ ವಿಶ್ರಾಂತ ಸಂಪಾದಕ ಬಾ. ಸಾಮಗ ಅವರನ್ನು ಹೈದರಾಬಾದಿನ ಕರ್ನಾಟಕ ಸಾಹಿತ್ಯ ಮಂದಿರದಲ್ಲಿ ಇತ್ತೀಚೆಗೆ ಏರ್ಪಡಿಸಿದ ಸಮಾರಂಭದಲ್ಲಿ ಸಾಹಿತ್ಯ ಮಂದಿರದ ಮಾಜಿ ಉಪಾಧ್ಯಕ್ಷ ಕೆ.ಎಂ. ಬಲ್ಲಾಳ್ ಅವರು ಸನ್ಮಾನಿಸಿದರು. ರಮೇಶ್ ಪುಟ್ಟಯ್ಯ ಅವರೂ ಚಿತ್ರದಲ್ಲಿದ್ದಾರೆ.

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-




ದೆಹಲಿಯ ಅಮೆರಿಕನ್ ಲೈಬ್ರೇರಿ ಆಫ್ ಕಾಂಗ್ರೆಸ್‌ನಲ್ಲಿ ಸುದೀರ್ಘ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಶ್ರೀ ಸೋಮನಾಥ ಬಿರಾದಾರ ಅವರನ್ನು ನೋಯ್ಡಾದ ಜೆ.ಎಸ್.ಎಸ್. ತಾಂತ್ರಿಕ ಮಹಾವಿದ್ಯಾಲಯ ಮತ್ತು ಗುರುಗಾಂವ್ ಕನ್ನಡ ಸಂಘದ ವತಿಯಿಂದ ದಿನಾಂಕ 19.05.2019ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಅಭಿನಂದಿಸಲಾಯಿತು.

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

Delhi Karnataka Sangha's Abhimatha
June-2019, Vol. No.29, Issue No.9, Price Rs.1/-
RNI Regn. No. 53405/91, DL-SW-1/4016/19-21
Date of Publication : June 8th / 9th, Posting Date :10th / 11th, Total Pages-20, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

